# ಭಾರತದಲ್ಲಿ ಗುತ್ತಿಗೆ ಶಿಕ್ಷಕರು

ತಾರಾ ಬೆಟೆಲ್ಲೀ, ವಿಮಲ ರಾಮಚಂದ್ರನ್

ತರಗತಿಯ ಒಳಗೆ ಸ್ವಲ್ಪಮಟ್ಟಿನ ಸ್ಥಿರತೆ ಮತ್ತು ಪರಿಣಾಮಕಾರಿ ಸ್ಥಿತಿಯನ್ನು ತರುವ ಪ್ರಯತ್ನದಲ್ಲಿದ್ದಾಗ ಪ್ರತಿಭಟನೆ, ಮುಷ್ಕರ, ಆಕ್ರೋಶ ಹಾಗು ನ್ಯಾಯಾಲಯ ಪ್ರಕರಣಗಳಿಂದ ಶಿಕ್ಷಕರ, ಆಡಳಿತಗಾರರ ಸಮಯ ಮತ್ತು ಸಂಪನ್ಮೂಲಗಳು ವ್ಯರ್ಥವಾಗುತ್ತಿದ್ದು ಗುತ್ತಿಗೆ ಶಿಕ್ಷಕರ ನಿರ್ವಹಣೆ ಎಂಬ ರಾಜಕೀಯ ಆರ್ಥಿಕತೆಯು ಕಷ್ಟ ಎಂದು ಸಾಬೀತಾಗಿದೆ. ಗುತ್ತಿಗೆ ಶಿಕ್ಷಕ ಪದ್ಧತಿಯನ್ನು ಪ್ರಾರಂಭದಿಂದಲೂ ಅನುಸರಿಸುತ್ತಿರುವ ಮಧ್ಯಪ್ರದೇಶ ಮತ್ತು ರಾಜಸ್ಥಾನ ಈ ಎರಡು ರಾಜ್ಯಗಳು ಈ ಪದ್ಧತಿಯಲ್ಲಿ ಅಥವಾ ಗುತ್ತಿಗೆಗೆ ಶಿಕ್ಷಕರ ನೇಮಕಾತಿ ನೀತಿಯಲ್ಲಿ ಮಹತ್ವದ ತಿದ್ದುಪಡಿ ತಂದಿವೆ. ಜಾರ್ಖಂಡ್, ಕರ್ನಾಟಕ, ಮಧ್ಯಪ್ರದೇಶ ಮಿಜೋರಾಂ, ಒಡಿಸ್ಸಾ, ಪಂಜಾಬ್, ರಾಜಸ್ಥಾನ, ತಮಿಳುನಾಡು ಮತ್ತು ಉತ್ತರಪ್ರದೇಶ–ಈ ಒಂಭತ್ತು ರಾಜ್ಯಗಳಲ್ಲಿ ನಡೆದ ಒಂದು ಅಧ್ಯಯನ ಈ ರಾಜ್ಯಗಳಲ್ಲಿ ಗುತ್ತಿಗೆ ಶಿಕ್ಷಕರ ನೇಮಕಾತಿ ಪದ್ಧತಿ ಎಷ್ಟು ವಿಶಾಲವಾಗಿ ಹರಡಿದೆ? ಗುತ್ತಿಗೆ ಶಿಕ್ಷಕರ ವೈಯಕ್ತಿಕ ವಿವರಗಳು ಖಾಯಂ ಶಿಕ್ಷಕರಿಗಿಂತ ಎಷ್ಟರ ಮಟ್ಟಿಗೆ ಭಿನ್ನವಾಗಿವೆ; ರಾಜಕೀಯ ಆರ್ಥಿಕತೆಯ ದೃಷ್ಟಿಯಿಂದ ನೋಡುವುದಾದರೆ ಗುತ್ತಿಗೆ ಶಿಕ್ಷಕರನ್ನು ಬಳಸಿಕೊಂಡು ಮಕ್ಕಳ ದಾಖಲಾತಿಯನ್ನು ಹೆಚ್ಚಿಸುವ ಗುರಿ ತಲಪುವಲ್ಲಿ ರಾಜ್ಯಗಳು ಎದುರಿಸಿದ ಸವಾಲುಗಳೇನು? ಎಂಬುದನ್ನು ಈ ಅಧ್ಯಯನ ಪರಿಶೀಲಿಸುತ್ತದೆ.

*ಟೀಚರ್ ಮ್ಯಾನೇಜ್‌ಮೆಂಟ್ ಅಂಡ್ ಡೆವಲ್‌ಮೆಂಟ್ ಕುರಿತ ಆರ್.ಜಿ.ಎಫ್ ಅಧ್ಯಕ್ಷರ ಆಶ್ರಯಲ್ಲಿ, ರಾಜೀವ್ ಗಾಂಧಿ ಫೌಂಡೇಶನ್, ನ್ಯೂಡೆಲ್ಲಿಯ ಹಣಕಾಸು ನೆರವಿನೊಂದಿಗೆ ನ್ಯಾಷನಲ್ ಯೂನಿವರ್ಸಿಟಿ ಫಾರ್ ಎಜುಕೇಷನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಶನ್ ನೆಡೆಸಿದ ಇತ್ತಿಚಿನ ಅಧ್ಯಯನವನ್ನು ಈ ಲೇಖನ ಆಧರಿಸಿದೆ.*
*ತಾರಾ ಬೆಟೆಲ್ಲಿ (tebetelle@worldbank.org) ಅವರು ವಾಶಿಂಗ್ಟ್‌ನ್ ಡಿಸಿ, ವರ್ಲ್ಡ್ ಬ್ಯಾಂಕ್‌ನ ಎಜುಕೇಶನ್ ಗ್ಲೋಬಲ್ ಪ್ರಾಕ್ಟಿಸ್‌ನ ಹಿರಿಯ ಅರ್ಥಶಾಸ್ತ್ರಜ್ಞರು. ವಿಮಲ ರಾಮಚಂದ್ರನ್ ರವರು [erudelhi@gmail.com] ಮ್ಯಾನೇಜಿಂಗ್ ಡೈರೆಕ್ಟರ್ ERU ಕನ್ಸಲ್‌ಟೆಂಟ್, ನೂಡೆಲ್ಲಿ,*

ಗುತ್ತಿಗೆ ಶಿಕ್ಷಕರು–ಎಂದರೆ ಒಂದು ನಿರ್ದಿಷ್ಟ ಅವಧಿಗೆ ನೇಮಕಗೊಳ್ಳುವ ಸುಲಭವಾಗಿ ರದ್ದುಗೊಳ್ಳುವ ಗುತ್ತಿಗೆ ಪದ್ದತಿಗೆ ಒಳಪಡುವವರು ಎಂದರ್ಥ. ಗುತ್ತಿಗೆ ಪದ್ದತಿ ೧೯೯೦ ರಿಂದ ಭಾರತದ ಶಾಲಾ ಶಿಕ್ಷಣ ವ್ಯವಸ್ಥೆಯ ಮುಖ್ಯ ಲಕ್ಷಣವಾಗಿದೆ.[1] ಮಕ್ಕಳ ಸಂಖ್ಯೆಯನ್ನು ಹೆಚ್ಚಿಸುವ, ಆರ್ಥಿಕವಾಗಿ ಕೈಗೆಟುಕುವ ರೀತಿಯಲ್ಲಿ ತ್ವರಿತವಾಗಿ ಶಿಕ್ಷಣವನ್ನು ವಿಸ್ತರಿಸುವ ಧ್ಯೇಯದೊಂದಿಗೆ ದೇಶದಾದ್ಯಂತ ಹಲವು ರಾಜ್ಯಗಳು ಗುತ್ತಿಗೆ ಶಿಕ್ಷಕರನ್ನು ನೇಮಿಸಲು ಪ್ರಾರಂಭಿಸಿದವು. ಈ ಶಿಕ್ಷಕರನ್ನು ಒಂದು ನಿರ್ದಿಷ್ಟ ಅವಧಿಗೆ ಒಂದು ವರ್ಷದ ಮಟ್ಟಿಗೆ ನೇಮಿಸಿಕೊಳ್ಳಲಾಯಿತು ಮತ್ತು ಖಾಯಂ ಶಿಕ್ಷಕರು ಪಡೆಯುವ ಒಂದಂಶದಷ್ಟು ವೇತನ ನೀಡಲಾಯಿತು. ಆದರೆ ಖಾಯಂ ಶಿಕ್ಷಕರಷ್ಟೇ ಕೆಲಸವನ್ನು ನಿರೀಕ್ಷಿಸಲಾಯಿತು. ಗುತ್ತಿಗೆ ಶಿಕ್ಷಕರ ವಿದ್ಯಾರ್ಹತೆಯನ್ನು ಖಾಯಂ ಶಿಕ್ಷಕರಿಗಿಂತ ಕಡಿಮೆ ನಿಗದಿಮಾಡಲಾಯಿತು.

ವಿಶಾಲವಾಗಿ ಹರಡಿರುವ ಗುತ್ತಿಗೆ ಶಿಕ್ಷಕರ ಬಳಕೆಯ ವಿಷಯ ವಿವಾದದಿಂದ ಮುಕ್ತವಾಗಿಲ್ಲ. ಚಿಂತಕರು, ಗುತ್ತಿಗೆ ಎಂಬ ಪದವು ಶಿಕ್ಷಕರಲ್ಲಿ ಹೊಣೆಗಾರಿಕೆ ಮೂಡಿಸುತ್ತದೆ ಎಂದು ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ ಗುತ್ತಿಗೆ ಶಿಕ್ಷಕರನ್ನು ಪೋಷಕರಿಂದ ಕಡಿಮೆ ದೂರುಗಳಿರುವ ಅಥವಾ ದೂರದ, ಸೌಲಭ್ಯಗಳಿಲ್ಲದ ಮತ್ತು ಖಾಯಂ ಶಿಕ್ಷಕರು ಹೋಗಲು ಬಯಸದ ಪ್ರದೇಶಗಳಲ್ಲಿ ನೇಮಿಸುವುದರಿಂದ ಸ್ವಲ್ಪ ಮಟ್ಟಿಗೆ ಹೊಣೆಗಾರಿಕೆ ಮೂಡಿಸಬಹುದು. ಆದಾಗ್ಯೂ ರಾಜ್ಯಗಳು ಕಡಿಮೆ ವೆಚ್ಚದ, ಕಡಿಮೆ ಗುಣಮಟ್ಟದ ಶಿಕ್ಷಕರನ್ನು ನೇಮಿಸಿಕೊಂಡು ಬೋಧನೆಯ ವೃತ್ತಿಪರತೆಯನ್ನು ಕೆಡಿಸಬಹುದು. ಮತ್ತೊಂದು ಕಳವಳಕಾರಿ ವಿಷಯವೆಂದರೆ ಸರ್ಕಾರ, ಉತ್ತಮ ಶೈಕ್ಷಣಿಕ ಅರ್ಹತೆ ಹೊಂದಿರುವ ದಕ್ಷ ಶಿಕ್ಷಕರನ್ನು ನೇಮಿಸಿಕೊಂಡು ಖಾಯಂ ಶಿಕ್ಷಕರಷ್ಟೆ ಕೆಲಸಕ್ಕೆ ಕಡಿಮೆ ವೇತನ ನೀಡುವಂತಾಗುತ್ತದೆ. ಹಾಗೆಯೇ ಇವರು ಇಚ್ಚಾನುಸಾರ ವಜಾಮಾಡುವ ಸ್ಥಿತಿಗೆ ಸಿಲುಕುತ್ತಾರೆ ಮತ್ತು ಕಿರುಕುಳಕ್ಕೂ ಒಳಗಾಗುತ್ತಾರೆ.

ಅಧ್ಯಯನದ ಪರಿಶೀಲನೆಯ ಪ್ರಕಾರ ಪರಿಣಾಮಕಾರಿ ಬೋಧನೆ ಹಾಗೂ ಗುತ್ತಿಗೆ ಮತ್ತು ಖಾಯಂ ಶಿಕ್ಷಕರ ವೆಚ್ಚದ ವಿಷಯದಲ್ಲಿ ಇಬ್ಬರ ನಡುವೆ ಸ್ವಲ್ಪ ವ್ಯತ್ಯಾಸವಿದೆ. ವಿಶೇಷವಾಗಿ ಮಕ್ಕಳ ಕಲಿಕೆ ವಿಷಯದಲ್ಲಿ ಗುತ್ತಿಗೆ ಶಿಕ್ಷಕರ ವೆಚ್ಚ ಕಡಿಮೆ ಇದೆ

(ಮುರುಳಿಧರನ್ ಮತ್ತು ಸುಂದರ್ ರಾಮನ್ 2010; ಪಾಂಡ್ಯ ಮತ್ತು ಗೋಯಲ್ 2010; ಆಥರ್‌ಟನ್ ಮತ್ತು ರೇಗ್‌ಡನ್ 2010). ಗುತ್ತಿಗೆ ಶಿಕ್ಷಕರ ಮಾರ್ಗದರ್ಶನದಡಿ ಅಧ್ಯಯನ ಮಾಡುತ್ತಿರುವ ಮಕ್ಕಳ ಒಟ್ಟು ಸಾಧನೆ ಖಾಯಂ ಶಿಕ್ಷಕರಿಗಿಂತ ಉತ್ತಮವಾಗಿದ್ದರೂ ಸಮಗ್ರ ಮಟ್ಟದಲ್ಲಿ ಅದು ತುಂಬಾ ಕಡಿಮೆ ಇದೆ (ದುಂದರ್ ಸಂಪಾದಿತ, 2014). ಮುಖ್ಯವಾಗಿ ತರಗತಿಯ ಒಳಗೆ ಸ್ವಲ್ಪಮಟ್ಟಿನ ಸ್ಥಿರತೆ ಮತ್ತು ಪರಿಣಾಮಕತ್ವವನ್ನು ತರಲು ಪ್ರಯತ್ನಿಸುತ್ತಿರುವಾಗ ಪ್ರತಿಭಟನೆ, ಮುಷ್ಕರ, ಆಕ್ರೋಶ ಹಾಗು ನ್ಯಾಯಾಲಯ ಪ್ರಕರಣಗಳಿಂದ ಶಿಕ್ಷಕರ, ಆಡಳಿತಗಾರರ ಸಮಯ ಮತ್ತು ಸಂಪನ್ಮೂಲ ವ್ಯರ್ಥವಾಗುತ್ತಿದ್ದು ಗುತ್ತಿಗೆ ಶಿಕ್ಷಕರ ನಿರ್ವಹಣೆ ಎಂಬ ರಾಜಕೀಯ ಆರ್ಥಿಕತೆಯು ಕಷ್ಟ ಎಂದು ಸಾಬೀತಾಗಿದೆ. ಗುತ್ತಿಗೆ ಶಿಕ್ಷಕ ಪದ್ಧತಿಯನ್ನು ಪಾರಂಭದಿಂದಲೂ ಅನುಸರಿಸುತ್ತಿರುವ ಮಧ್ಯಪ್ರದೇಶ ಮತ್ತು ರಾಜಸ್ಥಾನ ಈ ಎರಡು ರಾಜ್ಯಗಳು ಈ ಪದ್ಧತಿಯಲ್ಲಿ ಅಥವಾ ಗುತ್ತಿಗೆಗೆ ಶಿಕ್ಷಕರ ನೇಮಕಾತಿ ನೀತಿಯಲ್ಲಿ ಮಹತ್ವದ ತಿದ್ದುಪಡಿ ತಂದಿವೆ. ಜಾರ್ಕಂಡ್, ಕರ್ನಾಟಕ, ಮಧ್ಯಪ್ರದೇಶ ಮಿಜೋರಾಂ, ಒಡಿಸ್ಸಾ, ಪಂಜಾಬ್, ರಾಜಸ್ಥಾನ, ತಮಿಳುನಾಡು ಮತ್ತು ಉತ್ತರಪ್ರದೇಶ–ಈ ಒಂಭತ್ತು ರಾಜ್ಯಗಳಲ್ಲಿ ನಡೆದ ಒಂದು ಅಧ್ಯಯನ ಈ ರಾಜ್ಯಗಳಲ್ಲಿ ಗುತ್ತಿಗೆ ಶಿಕ್ಷಕರ ನೇಮಕಾತಿ ಪದ್ಧತಿ ಎಷ್ಟು ವಿಸ್ತಾರವಾಗಿ ಹರಡಿದೆ; ಗುತ್ತಿಗೆ ಶಿಕ್ಷಕರ ವೈಯಕ್ತಿಕ ವಿವರಗಳು ಖಾಯಂ ಶಿಕ್ಷಕರಿಗಿಂತ ಎಷ್ಟರ ಮಟ್ಟಿಗೆ ಭಿನ್ನವಾಗಿವೆ; ರಾಜಕೀಯ ಆರ್ಥಿಕತೆಯ ದೃಷ್ಟಿಯಿಂದ ನೋಡುವುದಾದರೆ ಗುತ್ತಿಗೆ ಶಿಕ್ಷಕರನ್ನು ಬಳಸಿಕೊಂಡು ಮಕ್ಕಳ ದಾಖಲಾತಿಯನ್ನು ಹೆಚ್ಚಿಸುವ ಗುರಿ ತಲಪುವಲ್ಲಿ ರಾಜ್ಯಗಳು ಎದುರಿಸಿದ ಸವಾಲುಗಳೇನು? ಎಂಬುದನ್ನು ಈ ಅಧ್ಯಯನ ಪರಿಶೀಲಿಸುತ್ತದೆ. ದಾಖಲಾತಿಗಳಲ್ಲಿ ಯಾವುದನ್ನು ಪರಿಣಾಮಕಾರಿ ಎನ್ನಲಾಗಿದೆಯೋ ಅದು ವಾಸ್ತವವಾಗಿ ನಿಜ ಜೀವನದಲ್ಲಿ ಕಷ್ಟ ಎಂಬುದು ಸಾಬೀತಾಗಿದೆ. ನೀತಿ ರೂಪಿಸುವ ದೃಷ್ಟಿಯಿಂದ ಎಲ್ಲಿ ಏನು ತಪ್ಪಾಗಿದೆ ಮತ್ತು ಏಕೆ ಕೆಲವು ಪ್ರಸ್ತಾವನೆಗಳನ್ನು ವ್ಯವಸ್ಥೆಯಲ್ಲಿ ವಿಸ್ತೃತವಾಗಿ ಅಳವಡಿಸಿಕೊಂಡಾಗ ಅವುಗಳು ಊಹಿಸಿದಂತೆ ಕಾರ್ಯ ನಿರ್ವಹಿಸಲಿಲ್ಲ ಎಂಬುದನ್ನು ಪ್ರಮುಖವಾಗಿ ಅರ್ಥಮಾಡಿಕೊಳ್ಳಬೇಕು.

ಈ ಲೇಖನದಲ್ಲಿ 3 ಮುಖ್ಯ ಪ್ರಶ್ನೆಗಳನ್ನು ಉತ್ತರಿಸಲು ಭಾರತದ ಒಂಭತ್ತು ರಾಜ್ಯಗಳಲ್ಲಿ ನಡೆಸಿದ ಅಧ್ಯಯನದ ಇತ್ತೀಚಿನ ಗುಣಾತ್ಮಕ ಮತ್ತು ಪ್ರಮಾಣಾತ್ಮಕ ಮಾಹಿತಿಯನ್ನು ಬಳಸಿದ್ದೇವೆ.

1. ಎಲ್ಲಾ ರಾಜ್ಯಗಳಲ್ಲಿ ಗುತ್ತಿಗೆ ಶಿಕ್ಷಕರನ್ನು ನೇಮಿಸುವ ಪದ್ಧತಿ ಹೇಗೆ ವಿಶಾಲವಾಗಿ ಹರಡಿಕೊಂಡಿದೆ? ಗುತ್ತಿಗೆ ಶಿಕ್ಷಕರ ವೈಯಕ್ತಿಕ ವಿವರಗಳು ಎಷ್ಟರ ಮಟ್ಟಿಗೆ ಖಾಯಂ ಶಿಕ್ಷಕರಿಗಿಂತ ಭಿನ್ನವಾಗಿವೆ?
2. ಗುತ್ತಿಗೆ ಶಿಕ್ಷಕರನ್ನು ಬಳಸಿಕೊಂಡು ದಾಖಲಾತಿಯನ್ನು ಹೆಚ್ಚಿಸುವ ಗುರಿ ತಲಪುವಲ್ಲಿ ರಾಜ್ಯಗಳು ಎದುರಿಸಿದ ಸವಾಲುಗಳು ಯಾವುವು?
3. ರಾಜಕೀಯ ಆರ್ಥಿಕತೆಯ ದೃಷ್ಟಿಯಿಂದ ಗುತ್ತಿಗೆ ಶಿಕ್ಷಕರನ್ನು ನೇಮಿಸುವ ಪದ್ಧತಿ ಸುಸ್ಥಿರವೇ?

ಈ ಆಧ್ಯಯನ ಒಳಗೊಂಡಿರುವ ರಾಜ್ಯಗಳೆಂದರೆ; ಜಾರ್ಖಂಡ್, ಕರ್ನಾಟಕ, ಮಧ್ಯಪ್ರದೇಶ ಮಿಜೋರಾಂ, ಒಡಿಸ್ಸಾ, ಪಂಜಾಬ್, ರಾಜಸ್ಥಾನ, ತಮಿಳುನಾಡು ಮತ್ತು ಉತ್ತರಪ್ರದೇಶ (ಕೋಷ್ಟಕ ೧). ಈ ಅಧ್ಯಯನ ಅಥವ ಲೇಖನದ ಮಾಹಿತಿಯು ಮೂರು ಮುಖ್ಯ ಮೂಲಗಳಿಂದ ಬಂದಿದೆ. ಒಂದು. ೨೦೦೦ ಮತ್ತು ೨೦೧೪ ರ ನಡುವಿನ ಶಿಕ್ಷಕರ ನಿರ್ವಹಣೆಗೆ ಸಂಬಂಧಿಸಿದ ಸರ್ಕಾರದ ಆದೇಶಗಳು, ಪ್ರಕಟಣೆಗಳು ಮತ್ತು ಸುತ್ತೋಲೆಗಳು. ಎರಡು. ಅಧ್ಯಯನದ ಪಾಲುದಾರರಾದ ಸರ್ಕಾರಿ ಅಧಿಕಾರಿಗಳು, ಶಿಕ್ಷಕರ ಸಂಘಟನೆಗಳು, ಜನಪ್ರತಿನಿಧಿಗಳು ಹಾಗು ಶಿಕ್ಷಕರೊಂದಿಗಿನ ಸಂದರ್ಶನ ಮತ್ತು ಗುಂಪು ಚರ್ಚೆಗಳು. ಮೂರು. ಜಿಲ್ಲಾ ಶೈಕ್ಷಣಿಕ ಮಾಹಿತಿ ವ್ಯವಸ್ಥೆ (ಡಿಐಎಸ್‌ಇ), ರಾಜ್ಯ ವರದಿ ರೂಪದಲ್ಲಿ ಮಂಡಿಸಿರುವ ಮಾಹಿತಿ ಮತ್ತು ೨೦೦೩–೦೪, ೨೦೧೨–೧೩ ರ ಶೈಕ್ಷಣಿಕ ವರ್ಷದ ಪ್ರಾಥಮಿಕ ಶಾಲೆಗಳ ಜಿಲ್ಲಾ ವರದಿಗಳು, ("ರಿಪೋರ್ಟ್ ಕಾರ್ಡ್"), ಈ ವಿವರಗಳು ಡಿಐಎಸ್‌ಇಯ ವೆಬ್‌ಸೈಟ್‌ನಲ್ಲಿ ಸಾರ್ವಜನಿಕವಾಗಿ ಲಭ್ಯವಿದೆ (www.dise.in).

**ಕೋಷ್ಟಕ–1: ಗುತ್ತಿಗೆ ಶಿಕ್ಷಕರ ನೇಮಕಾತಿಯ ರಾಜ್ಯವಾರು ಸ್ಥಿತಿ**

| ರಾಜ್ಯ | ಖಾಯಂ | ಗುತ್ತಿಗೆ |
|---|---|---|
| ಜಾರ್ಕಂಡ್ | ಹೌದು | ಹೌದು. ಸರ್ಕಾರದ ನಿರ್ಧಾರದಂತೆ ಶೇ50 ರಷ್ಟು ಹುದ್ದೆಗಳನ್ನು ಗುತ್ತಿಗೆ ಶಿಕ್ಷಕರಿಗೆ ಮೀಸಲಿಡಲಾಗಿದೆ |
| ಕರ್ನಾಟಕ | ಹೌದು | 1989 ರಿಂದ ಇಲ್ಲ |
| ಮಧ್ಯಪ್ರದೇಶ | ಹೌದು | ಹೌದು. ಎಲ್ಲಾ ಹಂತಗಳಲ್ಲಿ, ಪರಿವೀಕ್ಷಣೆ ಅವಧಿಯ ಮೂರು ವರ್ಷಗಳ ನಂತರ ಖಾಯಂ ಗೊಳಿಸಲಾಗುತ್ತದೆ |
| ಮಿಜೋರಾಂ | 1998ರಿಂದ ಇಲ್ಲ | ಹೆಚ್ಚಾಗಿದ್ದು, ಎಲ್ಲಾ ಹಂತಗಳಲ್ಲಿ ಗುತ್ತಿಗೆ ಶಿಕ್ಷಕರು ಇದ್ದಾರೆ. |
| ಒಡಿಸ್ಸಾ | ಹೌದು | ಹೌದು. ಎಲ್ಲಾ ಹಂತಗಳಲ್ಲಿ, ಪರಿವೀಕ್ಷಣೆ ಅವಧಿಯ ಆರು ವರ್ಷಗಳ ನಂತರ ಖಾಯಂ ಗೊಳಿಸಲಾಗುತ್ತದೆ |
| ಪಂಜಾಬ್ | ಹೌದು | ಹೌದು. ಪ್ರಾರಂಭದಲ್ಲಿ 1.5 ವರ್ಷಕ್ಕೆ ನಂತರ ಮೂರು ವರ್ಷ, ಆ ನಂತರ ಖಾಯಂ ಗೊಳಿಸಲಾಗಿದೆ. |
| ರಾಜಸ್ಥಾನ | ಹೌದು | 2013 ರಿಂದ ಇಲ್ಲ– ರಾಜಸ್ಥಾನದ ಉಚ್ಚ ನ್ಯಾಯಾಲಯದ ತೀರ್ಪಿನ ನಂತರ |
| ತಮಿಳುನಾಡು | ಹೌದು | ಹೌದು. 2002 ರಿಂದ ನಿರ್ದಿಷ್ಟ ವಿಷಯಗಳಲ್ಲಿ ಅರೆಕಾಲಿಕ ಶಿಕ್ಷಕರ ನೇಮಕ – ಆರ್ಟ್ಸ್, ಕ್ರಾಫ್ಟ್ ಮತ್ತು ದೈಹಿಕ ಶಿಕ್ಷಣ (ಪಿಯಿಟಿ) |
| ಉತ್ತರ ಪ್ರದೇಶ | ಹೌದು | ಮಾಹಿತಿ ಮತ್ತು ತಂತ್ರಜ್ಞಾನದಲ್ಲಿ ಮಾತ್ರ, (ಐಟಿ) ಮತ್ತು ಮಾಧ್ಯಮಿಕ ವೃತ್ತಿ ಪರ ಶಿಕ್ಷಣ ಮತ್ತು ಕ್ರಮೇಣ ಗುತ್ತಿಗೆ ಶಿಕ್ಷಕ ಪದ್ಧತಿಯಿಂದ ಹೊರಬಂದಿತು |

ಮೂಲ: ಡಿಐಎಸ್ಇ, ವಿವಿಧ ವರ್ಷಗಳು, ಎನ್‌ಯುಇಪಿಎ.

ಮಾಧ್ಯಮಿಕ ಶಾಲಾ ಮಾಹಿತಿ ತುಂಬಾ ಕಡಿಮೆ ಲಭ್ಯವಿದ್ದರಿಂದ ಅದರ ಸ್ಥಿತಿಯ/ಪ್ರವೃತ್ತಿಯ ವಿಶ್ಲೇಷಣೆ ಮಾಡಲಾಗಲಿಲ್ಲ. ಆದಾಗ್ಯೂ ಮಾಧ್ಯಮಿಕ ಶಾಲೆಗಳಲ್ಲಿ ಪ್ರಸ್ತುತ ಬೋಧನಾ ಕಾರ್ಯಭಾರದ ಚಿತ್ರಣ ನೀಡಲು ಜಿಲ್ಲಾ ಶೈಕ್ಷಣಿಕ ಮಾಹಿತಿ ವ್ಯವಸ್ಥೆಯಲ್ಲಿ ಲಭ್ಯವಿದ್ದ ಕಚ್ಚಾ ಮಾಹಿತಿಯನ್ನು ಬಳಸಲಾಗಿದೆ. ಒಂಭತ್ತು ರಾಜ್ಯಗಳ ಅಧ್ಯಯನದ ವಿಧಾನ ಮತ್ತು ಮಾಹಿತಿ ಬಗೆಗಿನ ಹೆಚ್ಚಿನ ವಿವರಣೆಗಾಗಿ ನೋಡಿ ರಾಮಚಂದ್ರನ್ ಸಂಪಾದಿತ (ಮುಂಬರುವ). ಈ ಲೇಖನದಲ್ಲಿ ಅಗತ್ಯವಿರುವ ಕಡೆ ಬೇರೆ ರಾಜ್ಯದಲ್ಲಿ ಲಭ್ಯವಿದ್ದ ಮಾಹಿತಿಯನ್ನು ಬಳಸಿದ್ದೇವೆ.

**ಐತಿಹಾಸಿಕ ಸಂದರ್ಭ**

1980ರಲ್ಲಿ ಪ್ರಾರಂಭವಾಗಿ 1990ರ ಭಾರತದ ಆರ್ಥಿಕ ಉದಾರೀಕರಣದ ನಂತರ ಮತ್ತಷ್ಟು ಹೆಚ್ಚಿ, ತೆರಿಗೆ ಸಂಗ್ರಹದಿಂದ ಸ್ವಚ್ಚತಾ ಕಾರ್ಯಕ್ಕೆ ಹೀಗೆ ರಾಜ್ಯದ ಹಲವು ಕಾರ್ಯಗಳಿಗೆ ಸರ್ಕಾರ ಗುತ್ತಿಗೆ ಕೆಲಸಗಾರರನ್ನು ಹೆಚ್ಚಾಗಿ ನೇಮಕ ಮಾಡಿಕೊಳ್ಳಲು ಪ್ರಾರಂಭಿಸಿತು (ರಾಬಿನ್‌ಸನ್ ಮತ್ತು ಗೌರಿ 2010). ಶಿಕ್ಷಣ ಕ್ಷೇತ್ರ ಇದರಿಂದ ಭಿನ್ನವಾಗಿರಲಿಲ್ಲ. ಮೂರು ಮುಖ್ಯ ಕಾರಣಗಳಿಗಾಗಿ 1980 ರ ಅಂತ್ಯಕ್ಕೆ ಭಾರತದ ರಾಜ್ಯಗಳಾದ ಹರಿಯಾಣ, ಹಿಮಾಚಲಪ್ರದೇಶ, ಪಂಜಾಬ್ ಮತ್ತು ರಾಜಸ್ಥಾನಗಳು ಗುತ್ತಿಗೆ ಶಿಕ್ಷಕರನ್ನು ನೇಮಿಸಿಕೊಳ್ಳಲು ನಿರ್ಧರಿಸಿದವು.

1. ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುವ ಶಿಕ್ಷಕರ ಕೊರತೆ, ಶಿಕ್ಷಕರ ಗೈರುಹಾಜರು ಸಮಸ್ಯೆ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ತೀವ್ರವಾಗಿ ಹೆಚ್ಚಿದ ಮಕ್ಕಳ ದಾಖಲಾತಿಯ ನಿರ್ವಹಣೆ.

2. 1990 ರ ಅಂತ್ಯಕ್ಕೆ 5ನೇ ವೇತನ ಆಯೋಗ ಶಿಫಾರಸ್ಸಿನಿಂದ ದೇಶದಾದ್ಯಂತ ವೇತನಗಳು ದ್ವಿಗುಣಗೊಂಡವು. ಇದು ಸರ್ಕಾರಗಳ ಹಣಕಾಸು ಹೊರೆಯನ್ನು ಹೆಚ್ಚಿಸಿತು. ಪ್ರಥಮ ಬಾರಿಗೆ ಈ ವೇತನ ಆಯೋಗ, ಕೇಂದ್ರ ವೇತನ ಆಯೋಗದ ನಿಯಮಗಳು ರಾಜ್ಯ ಸರ್ಕಾರಿ ನೌಕರರಿಗೂ ಸಹ ಅನ್ವಯಿಸುವಂತೆ ಕಡ್ಡಾಯಗೊಳಿಸಿತು. ಇಂತಹ ಆರ್ಥಿಕ ಸಂಕಷ್ಟದ ವಾತಾವರಣವು ರಾಜ್ಯ ಸರ್ಕಾರಗಳು ಹೆಚ್ಚು ಗುತ್ತಿಗೆ ಶಿಕ್ಷಕರನ್ನು ನೇಮಿಸುವಂತೆ ಮಾಡಿತು.


3. 1993ರ ಭಾರತ ಸಂವಿಧಾನದ 73 ಮತ್ತು 74 ತಿದ್ದುಪಡಿಯು ಗ್ರಾಮ ಪಂಚಾಯ್ತಿ ಮತ್ತು ಸ್ಥಳೀಯ ಸರ್ಕಾರದ ಕಾರ್ಯವನ್ನು ಕಡ್ಡಾಯಗೊಳಿಸಿತು. ಮಧ್ಯಪ್ರದೇಶವು ಸ್ಥಳೀಯ ಸರ್ಕಾರಗಳಿಗೆ ಶಾಲೆಗಳ ಮೇಲೆ ಹೆಚ್ಚಿನ ನಿಯಂತ್ರಣ ನೀಡಿದ ಮೊದಲ ರಾಜ್ಯ. ಈ ನಿಟ್ಟಿನಲ್ಲಿ ಶಾಲಾ ಶಿಕ್ಷಣ ಇಲಾಖೆ ಗುತ್ತಿಗೆ ಶಿಕ್ಷಕರನ್ನು ನೇಮಿಸಿಕೊಳ್ಳುವ ಜವಾಬ್ದಾರಿಯನ್ನು ಪಂಚಾಯತ್ ರಾಜ್ ವ್ಯವಸ್ಥೆಯ ಎರಡನೇ ಸ್ತರವಾದ ಜನಪದ್ (ತಾಲ್ಲೂಕ್) ಪಂಚಾಯತ್‌ಗೆ ವಹಿಸಿತು. ಹೀಗೆ ಸಂವಿಧಾನ ತಿದ್ದುಪಡಿಯಂತೆ ಸ್ಥಳೀಯ ಸರ್ಕಾರಗಳಿಗೆ ಶಾಲೆಗಳ ಗುತ್ತಿಗೆ ಶಿಕ್ಷಕರನ್ನು ನೇಮಿಸುವ ಅವಕಾಶ ನೀಡಲಾಯಿತು.

ಅನೇಕ ರಾಜ್ಯಗಳಲ್ಲಿ ಗುತ್ತಿಗೆ ಶಿಕ್ಷಕರ ನೇಮಕದಿಂದ ಮುಂದೆ 15–20 ವರ್ಷಗಳಲ್ಲಿ ಅವರು ಭಾರತದ ಶೈಕ್ಷಣಿಕ ವ್ಯವಸ್ಥೆಯ ಮುಖ್ಯ ಭಾಗವಾದರು. ಮಕ್ಕಳ ಸಾಧನೆ ಸುಧಾರಿಸಲು ಸಂಶೋಧಕರಿಂದ ಗುತ್ತಿಗೆ ಶಿಕ್ಷಕರ ಸಾಮರ್ಥ್ಯವನ್ನು ಪರಿಶೀಲಿಸಲಾಯಿತು. ರಾಜ್ಯ, ಸಮಯ ಮತ್ತು ಹಣಕಾಸಿನ ಮೂಲವನ್ನು ಆಧರಿಸಿ ಗುತ್ತಿಗೆ ಶಿಕ್ಷಕರಿಗೆ ವಿಭಿನ್ನ ಹೆಸರುಗಳನ್ನು ನೀಡಲಾಯಿತು. ಪ್ಯಾರಾ ಶಿಕ್ಷಕರು, ತಾತ್ಕಾಲಿಕ ಶಿಕ್ಷಕರು, ಅಲ್ಪಕಾಲಿಕ ಶಿಕ್ಷಕರು, ಅತಿಥಿ ಶಿಕ್ಷಕರು ಇತ್ಯಾದಿ. ಹಾಗೆಯೇ ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳಡಿ ಬೇರೆ ಹೆಸರುಗಳನ್ನು ನೀಡಲಾಯಿತು. ಉದಾಹರಣೆ: 2001 ರಲ್ಲಿ ಜಾರಿಗೆ ಬಂದ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಿಂದ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಾದ್ದರಿಂದ ಈ ಯೋಜನೆಯ ಹಣಕಾಸನ್ನು ಬಳಸಿಕೊಂಡು ಗುತ್ತಿಗೆ ಶಿಕ್ಷಕರನ್ನು ನೇಮಿಸಿಕೊಳ್ಳಲು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳನ್ನು ಪ್ರೋತ್ಸಾಹಿಸಿತು. ಇವರನ್ನು ಎಸ್‌ಎಸ್‌ಎ ಶಿಕ್ಷಕರೆಂದು ಹೇಳಲಾಯಿತು. ಆದರೆ ಇವರನ್ನು ಈ ಯೋಜನೆಯ ಉದ್ಯೋಗಿಗಳೆಂದು ಪರಿಗಣಿಸಿ ಖಾಯಂ ಬೋಧನೆಗೆ ನೇಮಿಸಬಹುದಿತ್ತು ಅಥವಾ ಯೋಜನೆ ಮುಗಿಯುತ್ತಿದ್ದಂತೆ ವಜಾ ಮಾಡಬಹುದಾಗಿತ್ತು.

ಇದಕ್ಕೆ ನಿದರ್ಶನವೆಂದರೆ 2009ರ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್‌ಎಂಎಸ್‌ಎ) ಜಾರಿಗೆ ಬಂದ ನಂತರ ಕೆಲವು ರಾಜ್ಯಗಳಲ್ಲಿ ಖಾಯಂ ಮತ್ತು ಗುತ್ತಿಗೆ ಶಿಕ್ಷಕರು ಎಂಬ ಎರಡು ತರಹದ ಶಿಕ್ಷಕರಿದ್ದಾರೆ. ಆದರೆ ಗುತ್ತಿಗೆ ಶಿಕ್ಷಕರಲ್ಲಿ ವಿವಿಧ ವಿಧಗಳಿವೆ–ಜಿಲ್ಲಾ ಪರಿಷತ್‌ನಿಂದ, ಎಸ್‌ಎಸ್‌ಎ/ಆರ್‌ಎಮ್‌ಸ್‌ಎ ಯೋಜನೆಯಡಿ ನೇಮಕಗೊಂಡವರು, ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ/ಪೋಷಕ–ಶಿಕ್ಷಕರ ಸಂಘದ ಮೂಲಕ ನೇಮಕವಾದವರು ಇತ್ಯಾದಿ. ವಿಭಿನ್ನ ಹೆಸರು ಮತ್ತು ನಿಯಮಗಳಿದ್ದು ಇವರು ಖಾಯಂ ಶಿಕ್ಷಕರಷ್ಟೇ ಕೆಲಸಮಾಡಬೇಕು. ಆದರೆ ಗುತ್ತಿಗೆ ರೂಪದಲ್ಲಿದ್ದು ಯಾವಾಗ ಬೇಕಾದರೂ ಸುಲಭವಾಗಿ ವಜಾ ಆಗುವಂತಹವರು ಮತ್ತು ಕಡಿಮೆ ವೇತನ ಹಾಗೂ ಸೌಲಭ್ಯ ಪಡೆಯಬೇಕು ಎಂದು ನಿರೀಕ್ಷಿಸಲಾಗುತ್ತಿತ್ತು.

(ಚಿತ್ರ–1: ಗುತ್ತಿಗೆ ಶಿಕ್ಷಕರನ್ನು ಒಳಗೊಂಡ ಪ್ರಾಥಮಿಕ ಬೋಧನಾ ಕಾರ್ಯಭಾರದ ಶೇಕಡಾವಾರು ವಿವರ)

**Figure 1: Percentage of Elementary Teaching Workforce Comprising Contract Teachers (All Elementary Schools)**




Source: DISE Report Cards data, 2003–13.

ಕಳೆದ 15–20 ವರ್ಷಗಳಿಂದ ಸರ್ಕಾರ ಮತ್ತು ಗುತ್ತಿಗೆ ಶಿಕ್ಷಕರ ನಡುವಿನ ಸಂಬಂಧದಲ್ಲಿ ಗೊಂದಲ ಇದೆ. ರಾಬಿನ್‌ಸನ್ ಗೌರಿ (2018) ಗುರುತಿಸುವಂತೆ ಕಳೆದ ಎರಡು ದಶಕಗಳಲ್ಲಿ ಗುತ್ತಿಗೆ ಶಿಕ್ಷಕರು ತಮ್ಮ ಕಡಿಮೆ ವೇತನ ಮತ್ತು ಉದ್ಯೋಗ ಅಭದ್ರತೆಯ ಬಗ್ಗೆ ಸರ್ಕಾರವನ್ನು ದೂರುತ್ತಿದ್ದಾರೆ. ಕೆಲವೊಮ್ಮೆ ಹಿಂಸೆ ಪ್ರತಿಭಟನೆಗೆ ಇಳಿದಿದ್ದಾರೆ. ಸಕಾಲಕ್ಕೆ ವೇತನ ಪಾವತಿಯಾಗದ ಬಗ್ಗೆ ದೂರಿದ್ದಾರೆ. 2010 ರಲ್ಲಿ ಪಂಜಾಬಿನ 27 ವರ್ಷದ ಗುತ್ತಿಗೆ ಶಿಕ್ಷಕಿ ಕಿರಣ್‌ಜಿತ್ ಕೌರ್ ಎಂಬುವರು ಗುತ್ತಿಗೆ ಶಿಕ್ಷಕರ ಸೇವಾ ಪರಿಸ್ಥಿತಿ ವಿರುದ್ಧ ಪ್ರತಿಭಟನೆ ಮಾಡಿ ಖಾಯಂ ಉದ್ಯೋಗಕ್ಕಾಗಿ ಒತ್ತಾಯಿಸಿದ್ದರು[2]. ಅದೇ ವರ್ಷ ಜಾರ್ಖಂಡ್‌ನಲ್ಲಿ ಅಂದಾಜು 18,000 ಸಾವಿರ ಗುತ್ತಿಗೆ ಶಿಕ್ಷಕರು ತಮ್ಮ ವೇತನ ಸಕ್ರಮಾತಿ ಮತ್ತು ಸೇವಾ ಪರಿಸ್ಥಿತಿಯನ್ನು ಸುಧಾರಿಸುವಂತೆ ಮುಷ್ಕರ ಮಾಡಿದರು (ಟೆಲಿಗ್ರಾಫ್ 2010). 3 ಡಿಸೆಂಬರ್ 2012 ಮತ್ತು 30 ಜನವರಿ 2013 ರ ನಡುವೆ ಚತ್ತೀಸಗಡ್‌ನಲ್ಲಿ ಸುಮಾರು 2,50,000 ಗುತ್ತಿಗೆ ಶಿಕ್ಷಕರು ತಮ್ಮ ವೇತನ ಮತ್ತು ಸೇವೆ ಸಕ್ರಮಗೊಳಿಸುವಂತೆ ಧರಣಿ ಮಾಡಿದರು. ಕೆಲಸ ಮಾಡಲು ತಿರಸ್ಕರಿಸಿದ್ದ ಗುತ್ತಿಗೆ ಶಿಕ್ಷಕರ ಸೇವೆಯನ್ನು ಸರ್ಕಾರ ರದ್ದುಗೊಳಿಸಿತ್ತು. ಆದರೂ ಅನೇಕರನ್ನು ಪುನಃ ಸೇವೆಗೆ ನೇಮಿಸಲಾಗಿತ್ತು[3]. ಮಾರ್ಚ್ 2013 ರಲ್ಲಿ ಬಿಹಾರದ ಗುತ್ತಿಗೆ ಶಿಕ್ಷಕರ ಸಂಘಟನೆ – ಪಂಚಾಯತ್ ನಗರ್ ಪ್ರಾರಂಭಿಕ್ ಶಿಕ್ಷಕ್ ಸಂಘದ ಸದಸ್ಯರು ಖಾಯಂ ಶಿಕ್ಷಕರಂತೆ ವೇತನ ಸಮಾನತೆ, ಸೇವೆ ಸಕ್ರಮಗೊಳಿಸುವಂತೆ ಮತ್ತು ಕೆಲಸದ ಪರಿಸ್ಥಿತಿಯನ್ನು ಸುಧಾರಿಸುವಂತೆ ಪ್ರತಿಭಟನೆ ನಡೆಸಿದ್ದ ಗುತ್ತಿಗೆ ಶಿಕ್ಷಕರ ಮೇಲೆ ಪೋಲೀಸ್ ಲಾಟಿ ಚಾರ್ಜ್ ನಡೆಯಿತು. ಪ್ರತಿಭಟನೆ ಹಿಂಸಾ ರೂಪಕ್ಕೆ ತಿರುಗಿ ಗುತ್ತಿಗೆ ಶಿಕ್ಷಕರು ಎರಡು ಪೋಲೀಸ್ ಜೀಪುಗಳನ್ನು ಸುಟ್ಟು, ಅರ್ಧ ಡಜನ್ ಬಸ್ಸುಗಳು ಮತ್ತು ಇತರೆ ವಾಹನಗಳನ್ನು ಜಖಂಗೊಳಿಸಿದ್ದರು (ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ 2013). ನವೆಂಬರ್ 2014 ರಲ್ಲಿ ಒಡಿಸ್ಸಾ ಪ್ರೌಢಶಿಕ್ಷಣ ಶಾಲಾ ಸಂಘದ ಸದಸ್ಯರು ಭುವನೇಶ್ವರದಲ್ಲಿ ಗುತ್ತಿಗೆ ಶಿಕ್ಷಕರಿಗೆ ಶಾಲಾ ಶಿಕ್ಷಣ ಇಲಾಖೆಯ ಆದೇಶ ಜಾರಿಗೊಳಿಬೇಕು ಮತ್ತು ವಾರ್ಷಿಕ ಶೇಕಡಾ 10 ರಷ್ಟು ವೇತನ ಹೆಚ್ಚಳಮಾಡಿ ಗ್ರೇಡ್ ಪೇ ಯೊಂದಿಗೆ ಮೂಲವೇತನ ಒದಗಿಸುವಂತೆ ಒತ್ತಾಯಿಸಿ ಅನಿರ್ದಿಷ್ಟ ಮುಷ್ಕರವನ್ನು ಕೈಗೊಂಡಿದ್ದರು (ಡಿಎನ್‌ಎ 2014). ಮೇ 2015 ದೆಹಲಿಯಲ್ಲಿ ಏಳು ಜನ ಗುತ್ತಿಗೆ ಶಿಕ್ಷಕರು ತಮ್ಮನ್ನು ಸೇವೆಯಿಂದ ತೆಗೆದುಹಾಕಿದ್ದನ್ನು ವಿರೋಧಿಸಿ ಉಪವಾಸ ಧರಣಿ ಕೈಗೊಂಡಿದ್ದರು. ಗುತ್ತಿಗೆ ಶಿಕ್ಷಕರಲ್ಲಿ ಕೆಲವರು 10 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ತಮ್ಮ ಗುತ್ತಿಗೆ ಅವಧಿಯನ್ನು ನವೀಕರಿಸುವಂತೆ ಒತ್ತಾಯಿಸಿದ್ದರು (ಟ್ರಿಬ್ಯೂನ್ 2015).

ಮೇಲೆ ವಿವರಿಸಿದ ಪ್ರತಿಭಟನೆಗಳು ಮತ್ತು ಈ ಬಗ್ಗೆ ರಾಬಿನ್‌ಸನ್ ಮತ್ತು ಗೌರಿ (2010) ಹೇಳಿರುವುದು ಭಾರತದಾದ್ಯಂತ ಎಲ್ಲಾ ರಾಜ್ಯಗಳಲ್ಲಿನ ಗುತ್ತಿಗೆ ಶಿಕ್ಷಕರ ಸಮಸ್ಯೆ ಮತ್ತು ಅದರ ವಿಸ್ತೃತತೆಯನ್ನು ತೋರಿಸುತ್ತವೆ. ಈ ಘಟನೆಗಳು ದುಬಾರಿ, ಅನಾಹುತಕಾರಿ ಮತ್ತು ಅದರ ನಿರ್ವಹಣೆ ಕಷ್ಟದ ವಿಷಯ. ಹಾಗೆಯೇ ಗುತ್ತಿಗೆ ಶಿಕ್ಷಕರಿಂದ ಹೊಣೆಗಾರಿಕೆ ಮತ್ತು ಉತ್ತಮ

ಗುಣಮಟ್ಟದ ಫಲಿತಾಂಶ ನೀರೀಕ್ಷಿಸುವುದು ಅವಾಸ್ತವಿಕ. ರಾಬಿನ್‌ಸನ್ ಮತ್ತು ಗೌರಿ (2010) ಗುರ್ತಿಸಿರುವಂತೆ ಗುತ್ತಿಗೆ ಶಿಕ್ಷಕರ ದೀರ್ಘಾವಧಿ ಉದ್ದೇಶಗಳು ಅವರ ಅಲ್ಪಾವಧಿ ಬೇಡಿಕೆಗಳಿಗಿಂತ ಭಿನ್ನವಾಗಿವೆ. ಸರ್ಕಾರಿ ಶಾಲೆಗಳ ಗುತ್ತಿಗೆ ಶಿಕ್ಷಕರ ಉದ್ದೇಶ ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ಕಾರ್ಯನಿರ್ವಹಿಸುವವರಿಗಿಂತ ಭಿನ್ನವಾಗಿರಬಹುದು. ಖಾಸಗಿ ಅನುದಾನ ರಹಿತ ಶಾಲೆಗಳ ಗುತ್ತಿಗೆ ಶಿಕ್ಷಕರು ಆಯಾ ಶಾಲೆಗಳಿಗೆ ಸೀಮಿತವಾಗಿದ್ದು ವ್ಯವಸ್ಥೆಯ ಭಾಗವಾಗಿರದೆ ಸೇವೆಯಿಂದ ವಜಾಗೊಳ್ಳುವುದೇ ಹೆಚ್ಚಾಗಿರುತ್ತದೆ. ಗುತ್ತಿಗೆ ಶಿಕ್ಷಕರು ತಮ್ಮ ವಾರ್ಷಿಕ ಗುತ್ತಿಗೆ ನವೀಕರಣದ ಬದಲಾಗಿ ಖಾಯಂ ಉದ್ಯೋಗದ ನಿರೀಕ್ಷೆಯಿಂದ ಖಾಯಂ ಶಿಕ್ಷಕರಿಗಿಂತ ಹೆಚ್ಚು ಕಷ್ಟ ಪಟ್ಟು ದುಡಿಯುವ ಇಚ್ಚೆ ಹೊಂದಿರಬಹುದು. ಪ್ರಯೋಗಾತ್ಮಕ ಅಧ್ಯಯನದ ಪ್ರಕಾರ ಈ ಅಂಶವೇ ಸರ್ಕಾರಿ ಶಾಲೆಗಳ ಗುತ್ತಿಗೆ ಶಿಕ್ಷಕರು ಖಾಯಂ ಶಿಕ್ಷಕರಿಗಿಂತ ಹೆಚ್ಚು ದುಡಿಯುವಂತೆ ಪ್ರೇರೇಪಿಸುತ್ತದೆ.

ಮೊದಲಿಗೆ ಒಂಭತ್ತು ಅಧ್ಯಯನ ರಾಜ್ಯಗಳ ಗುತ್ತಿಗೆ ಶಿಕ್ಷಕರ ಪ್ರಸ್ತುತ ನೇಮಕಾತಿ ನೀತಿ ಮತ್ತು ಬೋಧನೆಯಲ್ಲಿ ಶೇಕಡಾ ಎಷ್ಟು ಗುತ್ತಿಗೆ ಶಿಕ್ಷಕರಿದ್ದಾರೆ ಹಾಗೂ ಕಳೆದ 10 ವರ್ಷಗಳಲ್ಲಿ ನೇಮಕಾತಿಯಲ್ಲಿ ಹೆಚ್ಚು ಕಡಿಮೆಯಾಗಿದೆಯೇ ಎಂಬುದನ್ನು ನೋಡೋಣ. ವೇತನ ಮತ್ತು ಸೌಲಭ್ಯಗಳು, ವೃತ್ತಿಪರ ವಿದ್ಯಾರ್ಹತೆ ಹಾಗೂ ಜನಸಂಖ್ಯಾ ಹಿನ್ನೆಲೆ ಇತ್ಯಾದಿ ಅಂಶಗಳ ಮೇಲೆ ಗುತ್ತಿಗೆ ಶಿಕ್ಷಕರು ಮತ್ತು ಖಾಯಂ ಶಿಕ್ಷಕರ ಗುಣಲಕ್ಷಣಗಳನ್ನು ಹೋಲಿಕೆ ಮಾಡುತ್ತೇವೆ. ಇದಾದ ನಂತರ ಗುತ್ತಿಗೆ ಶಿಕ್ಷಕರನ್ನು ನೇಮಿಸಿಕೊಂಡಿರುವ ರಾಜ್ಯಗಳ ಮುಖ್ಯ ಸಮಸ್ಯೆಗಳನ್ನು ಚರ್ಚಿಸಲಾಗುತ್ತದೆ. ಅವುಗಳೆಂದರೆ (1) ಸಂಘಟನೆಗಳು; (2) ರಾಜಕೀಕರಣ ಮತ್ತು ಭ್ರಷ್ಟಾಚಾರ; (3) ಗುಣಮಟ್ಟ ಕುಸಿತ; (4) ಆಡಳಿತಾತ್ಮಕ ತೊಂದರೆಗಳು; (5) ಹಣಕಾಸು ಮತ್ತು ಸುಸ್ಥಿರತೆ; ಅಂತಿಮವಾಗಿ ಭವಿಷ್ಯದ ಮೇಲೆ ಇವುಗಳ ಪರಿಣಾಮಗಳನ್ನು ಚರ್ಚಿಸುತ್ತೇವೆ.

**ಗುತ್ತಿಗೆ ಶಿಕ್ಷಕರ ಸ್ಥಿತಿಗತಿ ಮತ್ತು ವ್ಯಕ್ತಿಗತ ವಿವರಗಳು**

ಕಳೆದ 15 ವರ್ಷಗಳಿಂದ ಕರ್ನಾಟಕವನ್ನು ಹೊರತು ಪಡಿಸಿ ಭಾರತದ ಪ್ರತೀ ರಾಜ್ಯ ಕನಿಷ್ಟ ಕೆಲವು ಗುತ್ತಿಗೆ ಶಿಕ್ಷಕರನ್ನಾದರೂ ನೇಮಕ ಮಾಡಿದೆ. ಟೇಬಲ್ 1 ತೋರಿಸುವಂತೆ ಅನೇಕ ರಾಜ್ಯಗಳು ಗುತ್ತಿಗೆ ಶಿಕ್ಷಕರನ್ನು ಶಾಶ್ವತ ಗುತ್ತಿಗೆ ರೂಪದಲ್ಲಿ ತೊಡಗಿಸಿವೆ. ನಮ್ಮ ಪ್ರಮಾಣಾತ್ಮಕ ಆಧಾರದ ಪ್ರಕಾರ ಸಾಮಾನ್ಯವಾಗಿ ವೈಯಕ್ತಿಕವಾಗಿ ಒಬ್ಬ ಗುತ್ತಿಗೆ ಶಿಕ್ಷಕನನ್ನು ಖಾಯಂಗೊಳಿಸುವ ವಿಷಯದಲ್ಲಿ ಶಿಕ್ಷಕನ ಸಾಧನೆಗಿಂತ ಸಂಘಟನೆಯ ಒತ್ತಡವೆ ಪ್ರಾಥಮಿಕ ಪ್ರೇರಣೆಯ ಅಂಶ. ಮೇಲಾಗಿ ರಾಜಸ್ಥಾನ ಮತ್ತು ಮಧ್ಯಪ್ರದೇಶಗಳು ಖಾಯಂ ಶಿಕ್ಷಕರ ನೇಮಕಾತಿಯನ್ನು ನಿಲ್ಲಿಸಿವೆ. ಇಲ್ಲಿ ಶಿಕ್ಷಕರ ನೇಮಕಾತಿಯ ಸಕ್ರಮ ಎಂದರೆ ಹಿಂದೆ ಆಯ್ಕೆಯಾಗಿ ಹೆಚ್ಚಿನ ಆದಾಯ ಗಳಿಸುವ ಖಾಯಂ ಶಿಕ್ಷಕರ ವೇತನಕ್ಕೆ ಸಮಾನ ಎಂದರ್ಥವಲ್ಲ. ಭಾರತದಲ್ಲಿ 2003–04 ಮತ್ತು 2012–13ರ ನಡುವೆ ಶೇಕಡಾ 85ಕ್ಕಿಂತ ಹೆಚ್ಚು ಪ್ರಾಥಮಿಕ ಹಂತದ ಶಿಕ್ಷಕ ಕಾರ್ಯಭಾರವನ್ನು ಖಾಯಂ ಸಾಮರ್ಥ್ಯದ ಮೇಲೆ ನೇಮಿಸಲಾಗಿದೆ[4]. ಗುತ್ತಿಗೆ ಶಿಕ್ಷಕರ ಶೇಕಡಾವರು ಪ್ರಮಾಣ 2003–04ರಲ್ಲಿ 7.1 ರಷ್ಟಿದ್ದದ್ದು, ಶೇಕಡಾ 7.3ಕ್ಕೆ ಕುಸಿಯುವುದಕ್ಕೆ ಮುಂಚೆ (ಚಿತ್ರ 1ರ ದಪ್ಪ ಗೆರೆಯಲ್ಲಿ ಕಾಣುವಂತೆ) 2012–2013ಲ್ಲಿ ಶೇಕಡಾ 12.2ರ ಗರಿಷ್ಠ ಹಂತ ತಲುಪಿತು. ಇದನ್ನು ಸಂಖ್ಯಾನುಕ್ರಮಣಿಕೆಯಲ್ಲಿ ಹೇಳುವುದಾದರೆ ಈ ಶೇಕಡಾವಾರುಗಳು 2012–13ರ 6.8 ದಶಲಕ್ಷ ಖಾಯಂ ಶಿಕ್ಷಕರಿಗೆ ಹೋಲಿಸಿದರೆ ಗುತ್ತಿಗೆ ಶಿಕ್ಷಕರು 0.5 ದಶಲಕ್ಷ ಎನ್ನಬಹುದು.

ಈ ಅಧ್ಯಯನದಲ್ಲಿ ಕಂಡುಬಂದಂತೆ ಮೂರು ರಾಜ್ಯಗಳಲ್ಲಿ ಮಾತ್ರ ಶೇಕಡಾ 10ಕ್ಕಿಂತ ಹೆಚ್ಚು ಗುತ್ತಿಗೆ ಶಿಕ್ಷಕರು ಪ್ರಾಥಮಿಕ ಶಿಕ್ಷಕರಾಗಿ ನೇಮಕಗೊಂಡಿದ್ದಾರೆ. ಆದರೆ ಹಲವು ರಾಜ್ಯಗಳಲ್ಲಿ ಈ ಶೇಕಡಾವಾರಿನಲ್ಲಿ ವ್ಯತ್ಯಾಸವಿದೆ. ಜಾರ್ಖಂಡ್ 2012–13 ರಲ್ಲಿ ಶೇಕಡಾ 49.1 ರಷ್ಟು ಅತೀ ಹೆಚ್ಚು ಗುತ್ತಿಗೆ ಶಿಕ್ಷಕರನ್ನು ನೇಮಿಸಿತು. ಮಿಜೋರಾಂ (26%), ಉತ್ತರ ಪ್ರದೇಶ (19%) ಈ ಎರಡು ರಾಜ್ಯಗಳಲ್ಲಿ ಮಾತ್ರ ಪ್ರಾಥಮಿಕ ಕಾರ್ಯಭಾರದಲ್ಲಿ ಗುತ್ತಿಗೆ ಶಿಕ್ಷಕರ ಪ್ರಮಾಣ ಶೇ 10 ಕ್ಕಿಂತ ಹೆಚ್ಚಾಗಿತ್ತು (ಟೇಬಲ್ 2). ಈ ಎಲ್ಲಾ ಮೂರು ರಾಜ್ಯಗಳ ಗುತ್ತಿಗೆ ಶಿಕ್ಷಕರ ನೇಮಕಾತಿಯಲ್ಲಿ ಸ್ವಲ್ಪ ಹೆಚ್ಚಳ ಕಂಡುಬಂದಿದೆ. ಆದರೆ ಮೊದಲ ಬಾರಿಗೆ ಗುತ್ತಿಗೆ ಶಿಕ್ಷಕರನ್ನು ನೇಮಿಸಿಕೊಂಡ ಮಧ್ಯಪ್ರದೇಶ ಮತ್ತು ರಾಜಸ್ತಾನಗಳಲ್ಲಿ ನೇಮಕಾತಿ ಕಡಿಮೆಯಾಗಿದೆ. ಕೆಲವು ರಾಜ್ಯಗಳು ವಿಶೇಶವಾಗಿ ಒಡಿಸ್ಸಾ ಮತ್ತು ಪಂಜಾಬ್‌ಗಳಲ್ಲಿನ ಗುತ್ತಿಗೆ ಶಿಕ್ಷಕರ ನೇಮಕಾತಿಯಲ್ಲಿ ನಿರಂತರ ಬದಲಾವಣೆಗಳು ಸಂಭವಿಸಿ ಈ ರಾಜ್ಯಗಳ ಶಿಕ್ಷಕರ ನೇಮಕಾತಿ ನೀತಿಯಲ್ಲಿನ ಸ್ಥಿರತೆಯ ಸಮಸ್ಯೆಯನ್ನು ಸೂಚಿಸುತ್ತವೆ.

**ಕೋಷ್ಟಕ ೨: ಖಾಯಂ ಮತ್ತು ಗುತ್ತಿಗೆ ಶಿಕ್ಷಕರ ವಿವರಗಳು**

(ಎಲ್ಲಾ ಪ್ರಾಥಮಿಕ ಶಾಲೆಗಳು) ೨೦೧೨–೧೩)

| | ಖಾಯಂ ಶಿಕ್ಷಕರು | | ಗುತ್ತಿಗೆ ಶಿಕ್ಷಕರು | |
|---|---|---|---|---|
| | ಸಂಖ್ಯೆಗಳು | ಒಟ್ಟು (%) | ಸಂಖ್ಯೆಗಳು | ಒಟ್ಟು (%) |
| ಭಾರತ | 68,15,567 | 93 | 5,38,606 | 7 |
| ಜಾರ್ಕಂಡ್ | 87,192 | 51 | 83,317 | 49 |
| ಕರ್ನಾಟಕ | 3,04,421 | 99 | 1929 | 1 |
| ಮಧ್ಯಪ್ರದೇಶ | 4,62,438 | 100 | 1580 | 0 |
| ಮಿಜೋರಾಂ | 14,236 | 75 | 4,872 | 25 |
| ಒಡಿಸ್ಸಾ | 2,66,159 | 98 | 6,014 | 2 |
| ಪಂಜಾಬ್ | 2,08,154 | 92 | 18,416 | 8 |
| ರಾಜಸ್ಥಾನ | 5,38,853 | 96 | 21,559 | 4 |
| ತಮಿಳುನಾಡು | 4,54,453 | 96 | 19,758 | 4 |
| ಉತ್ತರ ಪ್ರದೇಶ | 7,71,249 | 81 | 1,82,469 | 19 |

ಮೂಲ: ಡಿಐಎಸ್ಇ ರಿಪೋರ್ಟ್ ಕಾರ್ಡ್, ಡೇಟಾ, 2012–13

**ಕೋಷ್ಟಕ ೩: ಗುತ್ತಿಗೆ ಶಿಕ್ಷಕರ ವಿವರಗಳು (ಎಲ್ಲಾ ಮಾಧ್ಯಮಿಕ ಶಾಲೆಗಳು) ೨೦೧೨–೧೩**

| | ಖಾಯಂ ಶಿಕ್ಷಕರು | | ಗುತ್ತಿಗೆ ಶಿಕ್ಷಕರು | |
|---|---|---|---|---|
| | ಸಂಖ್ಯೆಗಳು | ಒಟ್ಟು (%) | ಸಂಖ್ಯೆಗಳು | ಒಟ್ಟು (%) |
| ಭಾರತ | 23,19,598 | 87 | 2,78,503 | 10 |
| ಜಾರ್ಕಂಡ್ | 33,467 | 85 | 5,310 | 13 |
| ಕರ್ನಾಟಕ | 1,29,932 | 94 | 6987 | 5 |
| ಮಧ್ಯಪ್ರದೇಶ | 62,800 | 70 | 17,737 | 20 |
| ಮಿಜೋರಾಂ | 1,419 | 33 | 2,905 | 67 |
| ಒಡಿಸ್ಸಾ | 62,371 | 82 | 11,600 | 15 |
| ಪಂಜಾಬ್ | 93,703 | 68 | 44,140 | 32 |
| ರಾಜಸ್ಥಾನ | 1,97,440 | 89 | 2,578 | 1 |
| ತಮಿಳುನಾಡು | 2,09,043 | 81 | 41,141 | 16 |
| ಉತ್ತರ ಪ್ರದೇಶ | 1,44,454 | 91 | 1,988 | 1 |

Source: DISE Report Cards Data, 2012-13

**ಕೋಷ್ಟಕ ೪: ಖಾಯಂ ಮತ್ತು ಗುತ್ತಿಗೆ ಶಿಕ್ಷಕರ ವಿವರಗಳು (ಎಲ್ಲಾ ಪ್ರಾಥಮಿಕ ಶಾಲೆಗಳು) ೨೦೧೨-೧೩**

| | ಖಾಯಂ ಶಿಕ್ಷಕರು | | | ಗುತ್ತಿಗೆ ಶಿಕ್ಷಕರು | | |
|---|---|---|---|---|---|---|
| | ಸಂಖ್ಯೆಗಳು | ಮಹಿಳಾ(%) | ಪದವೀಧರರು(%) | ಸಂಖ್ಯೆಗಳು | ಮಹಿಳಾ(%) | ಪದವೀಧರರು(%) |
| ಭಾರತ | 6,815,567 | 46 | 64 | 5,38,606 | 49 | 66 |
| ಜಾರ್ಕಂಡ್ | 87,192 | 38 | 69 | 83,317 | 25 | 65 |
| ಕರ್ನಾಟಕ | 3,04,421 | 58 | 12% | 1,929 | 59 | 16 |
| ಮಧ್ಯಪ್ರದೇಶ | 4,62,438 | 41 | 67.0 | 1,580 | 52 | 57 |
| ಮಿಜೋರಾಂ | 14,236 | 41 | 47 | 4,872 | 53 | 50 |
| ಒಡಿಸ್ಸಾ | 2,66,159 | 40 | 56 | 6,014 | 48 | 60 |
| ಪಂಜಾಬ್ | 208,154 | 71 | 83 | 18,416 | 81 | 80 |
| ರಾಜಸ್ಥಾನ | 5,38,853 | 31 | 80 | 21,559 | 29 | 66 |
| ತಮಿಳುನಾಡು | 4,54,453 | 73 | 76 | 19,758 | 71 | 70 |
| ಉತ್ತರ ಪ್ರದೇಶ | 7,71,349 | 33 | 73 | 1,82,469 | 57 | 64 |

Source: DISE Report Cards Data, 2012-13

**ಕೋಷ್ಟಕ ೫: ಖಾಯಂ ಮತ್ತು ಗುತ್ತಿಗೆ ಶಿಕ್ಷಕರ ವಿವರಗಳು (ಎಲ್ಲಾ ಮಾಧ್ಯಮಿಕ ಶಾಲೆಗಳು) ೨೦೧೨-೧೩**

| | ಖಾಯಂ ಶಿಕ್ಷಕರ ವಿವರಗಳು (ಎಲ್ಲಾ ಮಾಧ್ಯಮಿಕ ಶಾಲೆಗಳು)೨೦೧೨-೧೩, | | | | | ಗುತ್ತಿಗೆ ಶಿಕ್ಷಕರು ವಿವರಗಳು (ಎಲ್ಲಾ ಮಾಧ್ಯಮಿಕ ಶಾಲೆಗಳು) ೨೦೧೨-೧೩ | | | | |
|---|---|---|---|---|---|---|---|---|---|---|
| | ಸಂಖ್ಯೆಗಳು | ಮಹಿಳಾ % | ಎಸ್ಸಿ/ಎಸ್ಟಿ % | ಪದವೀಧರರು % | ತರಬೇತಿ % | ಸಂಖ್ಯೆಗಳು | ಮಹಿಳಾ % | ಎಸ್ಸಿ/ಎಸ್ಟಿ % | ಪದವೀಧರರು % | ತರಬೇತಿ % |
| ಭಾರತ | 23,19,598 | 45 | 16 | 82 | 16 | 2,78,503 | 59 | 18 | 86 | 8 |
| ಜಾರ್ಕಂಡ್ | 33,467 | 39 | 22 | 85 | 5 | 5,310 | 37 | 25 | 84 | 22 |
| ಕರ್ನಾಟಕ | 1,29,932 | 48 | 16 | 38 | 21 | 6,987 | 52 | 16 | 31 | 18 |
| ಮಧ್ಯಪ್ರದೇಶ | 62,800 | 47 | 18 | 85 | 4 | 17,737 | 53 | 21 | 83 | 7 |
| ಮಿಜೋರಾಂ | 1,419 | 29 | 91 | 94 | 88 | 2,905 | 38 | 97 | 96 | 48 |
| ಒಡಿಸ್ಸಾ | 62,371 | 29 | 8 | 79 | 9 | 11,600 | 43 | 31 | 77 | 18 |
| ಪಂಜಾಬ್ | 93,703 | 69 | 14 | 89 | 13 | 44,140 | 78 | 11 | 88 | 5 |
| ರಾಜಸ್ಥಾನ | 1,97,440 | 28 | 20 | 85 | 2 | 2,576 | 23 | 27 | 89 | 1 |
| ತಮಿಳುನಾಡು | 2,09,043 | 67 | 17 | 89 | 19 | 41,151 | 80 | 14 | 87 | 2 |
| ಉತ್ತರ ಪ್ರದೇಶ | 1,44,454 | 23 | 9 | 82 | 22 | 1,988 | 33 | 15 | 77 | 14 |

Source: DISE Various Years, NUEPA

ಮಾಧ್ಯಮಿಕ ಶಾಲಾ ಶಿಕ್ಷಕರಲ್ಲಿ ಶೇಕಡಾ 87 ರಷ್ಟು ಶಿಕ್ಷಕರು ಖಾಯಂ ಉದ್ಯೋಗದಲ್ಲಿದ್ದರೆ, ಶೇಕಡಾ 10 ರಷ್ಟು ಗುತ್ತಿಗೆ ರೂಪದಲ್ಲಿದ್ದಾರೆ[5] (ಟೇಬಲ್ 3). ಒಂಭತ್ತು ರಾಜ್ಯಗಳಲ್ಲಿ ಆರು (ಮಧ್ಯಪ್ರದೇಶ, ಪಂಜಾಬ್ ಮತ್ತು ಮಿಜೋರಾಂ ಹೊರತು ಪಡಿಸಿ)

ಶೇಕಡಾ 15 ರಷ್ಟು ಅಥವಾ ಅದಕ್ಕೂ ಕಡಿಮೆ ಮಾಧ್ಯಮಿಕ ಶಾಲಾ ಶಿಕ್ಷಕರನ್ನು ಗುತ್ತಿಗೆ ಆಧಾರದಮೇಲೆ ನೇಮಿಸುತ್ತವೆ. ಶಿಕ್ಷಕರ ನೇಮಕಾತಿಯ ಸ್ವರೂಪದಲ್ಲಿ ಮಿಜೋರಾಂ ಸ್ವಲ್ಪ ಭಿನ್ನವಾಗಿದ್ದು ಶೇಕಡಾ 67 ರಷ್ಟು ಶಿಕ್ಷಕರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿದೆ. ಇದು ಪಂಜಾಬ್‌ನ ಶೇಕಡಾ 29 ರಷ್ಟು ಗುತ್ತಿಗೆ ಶಿಕ್ಷಕರ ಪ್ರಮಾಣಕ್ಕಿಂತ ಎರಡು ಪಟ್ಟು ಜಾಸ್ತಿ ಎನ್ನಬಹುದು.

## ವ್ಯತ್ಯಾಸ ಏನು? ಗುತ್ತಿಗೆ ಶಿಕ್ಷಕರತ್ತ ಒಂದು ದೃಷ್ಟಿ

**ಜನಸಂಖ್ಯಾ ವಿವರ ಮತ್ತು ಅರ್ಹತೆ:**_ಅಖಿಲ ಭಾರತ ಮಟ್ಟದಲ್ಲಿ ಪ್ರಾಥಮಿಕ ಶಾಲೆಗಳಲ್ಲಿನ ಖಾಯಂ (46%) ಮಹಿಳಾ ಶಿಕ್ಷಕರ ಶೇಕಡಾವಾರು ಪ್ರಮಾಣ ಗುತ್ತಿಗೆ (49%) ಮಹಿಳಾ ಶಿಕ್ಷಕರ ಪ್ರಮಾಣಕ್ಕೆ ಹತ್ತಿರವಿದೆ. (ಟೇಬಲ್4). ಈ ಪ್ರಮಾಣ ಎಲ್ಲಾ ರಾಜ್ಯಗಳಲ್ಲಿ ವಿಭಿನ್ನವಾಗಿದೆ. ಕರ್ನಾಟಕ, ತಮಿಳುನಾಡು, ರಾಜಸ್ಥಾನ ಮತ್ತು ಮಧ್ಯಪ್ರದೇಶ ಗಳಲ್ಲಿ ಖಾಯಂ ಮಹಿಳಾ ಶಿಕ್ಷಕರ ಶೇಕಡಾವಾರು ಪ್ರಮಾಣ ಗುತ್ತಿಗೆ ಮಹಿಳಾ ಶಿಕ್ಷಕರ ಶೇಕಡಾವಾರು ಪ್ರಮಾಣಕ್ಕೆ ಸಮಾನವಾಗಿದೆ. ಉತ್ತರಪ್ರದೇಶದಲ್ಲಿ ಶೇಕಡಾ 33% ಮಹಿಳೆಯರು ಖಾಯಂ ಶಿಕ್ಷಕರಾಗಿದ್ದರೆ, ಶೇಕಡಾ 57% ಮಹಿಳೆಯರು ಗುತ್ತಿಗೆ ಶಿಕ್ಷಕರಾಗಿದ್ದಾರೆ. ಇದಕ್ಕೆ ವಿರುದ್ದವಾಗಿ ಜಾರ್ಖಂಡ್‌ನಲ್ಲಿ ಖಾಯಂ ಶಿಕ್ಷಕರ ಪ್ರಮಾಣ (38%) ಹೆಚ್ಚಾಗಿದೆ. ಸಮಗ್ರ ವಾಗಿ ನೋಡುವುದಾದರೆ ಪ್ರಾಥಮಿಕ ಶಾಲೆಗಳಲ್ಲಿನ ಖಾಯಂ ಶಿಕ್ಷಕರು ಮತ್ತು ಗುತ್ತಿಗೆ ಶಿಕ್ಷಕರು ಸಮಾನ ಅರ್ಹತೆ ಹೊಂದಿದ್ದು ಶೇಕಡಾ 64 ರಷ್ಟು ಖಾಯಂ ಶಿಕ್ಷಕರು ಪದವೀಧರರಾಗಿದ್ದರೆ ಶೇಕಡಾ 66 ರಷ್ಟು ಗುತ್ತಿಗೆ ಶಿಕ್ಷಕರು ಪದವೀಧರರು. ಉತ್ತರಪ್ರದೇಶ ಮತ್ತು ಮಧ್ಯಪ್ರದೇಶ ಗಳಲ್ಲಿ ಈ ವ್ಯತ್ಯಾಸ ಹೆಚ್ಚಾಗಿದ್ದು ಖಾಯಂ ಶಿಕ್ಷಕರು ಉತ್ತಮ ವಿದ್ಯಾರ್ಹತೆ ಹೊಂದಿದ್ದಾರೆ.

ಸಮಗ್ರವಾಗಿ ಮಾಧ್ಯಮಿಕ ಶಾಲೆಗಳ ಕಡೆ ದೃಷ್ಟಿ ಹಾಯಿಸಿದರೆ ಖಾಯಂ ಶಿಕ್ಷಕರು ಮತ್ತು ಗುತ್ತಿಗೆ ಶಿಕ್ಷಕರ ಲಿಂಗ ಸಂಯೋಜನೆಯಲ್ಲಿ ಹೆಚ್ಚು ವ್ಯತ್ಯಾಸವಿದೆ. ಶೇಕಡಾ 60 ರಷ್ಟು ಮಹಿಳೆಯರು ಗುತ್ತಿಗೆ ಶಿಕ್ಷಕರಾಗಿದ್ದರೆ ಶೇಕಡಾ 45 ರಷ್ಟು ಮಹಿಳೆಯರು ಖಾಯಂ ಶಿಕ್ಷಕರಾಗಿದ್ದಾರೆ. ಕೆಲವು ರಾಜ್ಯಗಳಲ್ಲಿ ಹೆಚ್ಚು ವ್ಯತ್ಯಾಸವಿದೆ. ತಮಿಳುನಾಡು, ಪಂಜಾಬ್ ಮತ್ತು ಒಡಿಸ್ಸಾಗಳಲ್ಲಿ ಮಹಿಳಾ ಗುತ್ತಿಗೆ ಶಿಕ್ಷಕರ ಶೇಕಡಾವಾರು ಪ್ರಮಾಣ ಖಾಯಂ ಶಿಕ್ಷಕರಿಗಿಂತ ಹೆಚ್ಚಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಖಾಯಂ ಶಿಕ್ಷಕ ಪದವೀಧರರು ಮತ್ತು ಗುತ್ತಿಗೆ ಶಿಕ್ಷಕ ಪದವೀಧರರ ಶೇಕಡಾವಾರಿನಲ್ಲಿ ಅಂತಹ ವ್ಯತ್ಯಾಸಗಳಿಲ್ಲ. ಹಾಗೆಯೇ ಸೇವಾವಧಿಯಲ್ಲಿ ತರಬೇತಿ ಪಡೆದಿರುವ ಶಿಕ್ಷಕರು ಮತ್ತು ಪದವೀಧರರಲ್ಲಿ ಗುತ್ತಿಗೆ ಶಿಕ್ಷಕರಿಗಿಂತ (7%) ಖಾಯಂ ಶಿಕ್ಷಕರ ಪ್ರಮಾಣ (16%) ಹೆಚ್ಚಾಗಿದೆ. ಒಡಿಸ್ಸಾ ಮತ್ತು ಮಿಜೋರಾಂ ನಂತಹ ರಾಜ್ಯಗಳಲ್ಲಿ ವ್ಯತ್ಯಾಸಗಳು ಹೆಚ್ಚಾಗಿವೆ. ಮಿಜೋರಾಂನಲ್ಲಿ ತರಬೇತಿ ಹೊಂದಿದ ಖಾಯಂ ಶಿಕ್ಷಕರ ಪ್ರಮಾಣ ಹೆಚ್ಚಿದೆ (88% v 48%). ಒಡಿಸ್ಸಾದಲ್ಲಿ ಇದಕ್ಕೆ ವಿರುದ್ದ ಸ್ಥಿತಿ ಇದೆ ಅಂದರೆ ಶೇಕಡಾ 18 ರಷ್ಟು ಗುತ್ತಿಗೆ ಶಿಕ್ಷಕರು ತರಬೇತಿ ಹೊಂದಿದ್ದರೆ ಶೇಕಡಾ 9 ರಷ್ಟು ಮಾತ್ರ ಖಾಯಂ ಶಿಕ್ಷಕರು ತರಬೇತಿ ಹೊಂದಿದ್ದಾರೆ (**ಕೋಷ್ಟಕ** 5, ಪು 8).

**ವೇತನಗಳು:**

ಎಲ್ಲಾ ರಾಜ್ಯಗಳ ಗುತ್ತಿಗೆ ಶಿಕ್ಷಕರ ವೇತನಗಳು ತುಂಬಾ ಬದಲಾಗುತ್ತಿವೆ (**ಕೋಷ್ಟಕ** 6). ಪಂಜಾಬ್‌ನಲ್ಲಿ ಒಳಗೊಳ್ಳುವ ಶಿಕ್ಷಣ ಸಂಪನ್ಮೂಲದ–ಶಿಕ್ಷಕ ವರ್ಗಕ್ಕೆ ಸೇರುವ ಗುತ್ತಿಗೆ ಶಿಕ್ಷಕರಿಗೆ ತಿಂಗಳಿಗೆ ರೂ. 19200 ಗಳನ್ನು ನೀಡಲಾಗುತ್ತದೆ. ಎಸ್‌ಎಸ್‌ಎ/ಆರ್‌ಎಮ್‌ಎಸ್‌ಎ ಯೋಜನೆಯಡಿ ಹಿರಿಯ ಪ್ರಾಥಮಿಕ ಶಾಲೆಗೆ ನೇಮಕಗೊಂಡ ಶಿಕ್ಷಕರಿಗೆ ರೂ. 31500 ಕೊಡಬಹುದು ಎಂದು ನಿರೀಕ್ಷಿಸಬಹುದು[7]. ಆದರೆ ರಾಜಸ್ಥಾನದಲ್ಲಿ ಈ ತನಕ ಪ್ರಾಥಮಿಕ ಹಂತದ ಒಬ್ಬ ಗುತ್ತಿಗೆ ಶಿಕ್ಷಕನಿಗೆ ರೂ. 5300 ಎಂದು ನಿರೀಕ್ಷಿಸಬಹುದು. ಪ್ರತೀ ರಾಜ್ಯದಲ್ಲಿ ಪಂಜಾಬ್‌ನ್ನು ಒಳಗೊಂಡು ಒಬ್ಬ ಗುತ್ತಿಗೆ ಶಿಕ್ಷಕನ ವೇತನ ಒಬ್ಬ ಖಾಯಂ ಸರ್ಕಾರಿ ಶಿಕ್ಷಕನ ವೇತನದ ಒಂದು ಭಾಗ ಅಥವಾ ಅಂಶವಾಗಿ ಮುಂದುವರಿಯಿತು.[8] ಪಂಜಾಬ್‌ನಲ್ಲಿ ಅನುಭವದ ಮೇಲೆ ಒಬ್ಬ ಖಾಯಂ ಶಿಕ್ಷಕನ ವೇನತ ರೂ. 41340 ರಿಂದ ರೂ. 91346 ರ ನಡುವೆ ಇರಬಹುದೆಂದು ನಿರೀಕ್ಷಿಸಬಹುದು. ರಾಜಸ್ಥಾನದಲ್ಲಿ ಹೊಸದಾಗಿ ನೇಮಕವಾದ ಮಾಧ್ಯಮಿಕ ಶಾಲೆಯ ಖಾಯಂ ಶಿಕ್ಷಕನ ನಿವ್ವಳ ವೇತನ ರೂ. 28331. ಸಾಮಾನ್ಯವಾಗಿ ಖಾಯಂ ಶಿಕ್ಷಕರು ಪಡೆಯವ ಹಾಗೆ ಗುತ್ತಿಗೆ ಶಿಕ್ಷಕರು ವಾರ್ಷಿಕ ವೇತನ ಬಡ್ತಿ ಪಡೆಯುವುದಿಲ್ಲ.

**ಕೋಷ್ಟಕ ೬: ಒಂಭತ್ತು ರಾಜ್ಯಗಳಲ್ಲಿ ಗುತ್ತಿಗೆ ಶಿಕ್ಷಕರ ವೇತನಗಳು**

| | | ಪ್ರಾಥಮಿಕ ಒಟ್ಟು ವೇತನ (ರೂ) | ಮಾಧ್ಯಮಿಕ ಒಟ್ಟು ವೇತನ (ರೂ) |
|---|---|---|---|
| ತಮಿಳುನಾಡು | ಎಸ್‌ಎಸ್‌ಎ ಅಡಿ ವಿಶೇಷ ಅರೆಕಾಲಿಕ ಶಿಕ್ಷಕರನ್ನು (ಆರ್ಟ್ಸ್, ಪಿಯಿಟಿ, ಮ್ಯೂಸಿಕ್ ಇತ್ಯಾದಿ) ಗಳಿಗೆ ನೇಮಿಸಲಾಗಿದೆ. | ತಿಂಗಳಿಗೆ ೫,೦೦೦ | - |
| ಕರ್ನಾಟಕ | | ಅನ್ವಯಿಸುವುದಿಲ್ಲ | ಅನ್ವಯಿಸುವುದಿಲ್ಲ |
| ಜಾರ್ಖಂಡ್ | ಎಸ್‌ಎಸ್‌ಎ/ಜೆಸಿ ಅಡಿ ನೇಮಿಸಲಾದ ಗುತ್ತಿಗೆ ಶಿಕ್ಷಕರು | 5,700 ತರಬೇತಿ ಇಲ್ಲದ | |
| | | 6,200 ತರಬೇತಿ ಮತ್ತು | |
| | | 6,200 ತರಬೇತಿ + ಟಿಇಟಿ | – |
| ಒಡಿಸ್ಸಾ | ಶಿಕ್ಷಕ್ ಸಹಾಯಕ್ (ಏಸ್‌ಎಸ್‌ಎ ಅಡಿ) | 5,200 | – |
| | ಜೂನಿಯರ್ ಟೀಚರ್ (ಏಸ್‌ಎಸ್‌ಎ ಅಡಿ) | 7,000 | – |
| ರಾಜಸ್ಥಾನ | ವಿದ್ಯಾರ್ಥಿ ಮಿತ್ರ ಹಂತ ೧ ( ಪಿಅರ್‌ಐ ಅಡಿ) | 4,800 | – |
| | ವಿದ್ಯಾರ್ಥಿ ಮಿತ್ರ ಹಂತ ೨ ( ಪಿಅರ್‌ಐ ಅಡಿ) | 4,800 | – |
| | ವಿದ್ಯಾರ್ಥಿ ಮಿತ್ರ ಮಾಧ್ಯಮಿಕ ( ಪಿಅರ್‌ಐ ಅಡಿ) | - | 5,300 |
| ಮಿಜೋರಾಂ | ತರಬೇತಿ ಪಡೆದ ಅಂಡರ್‌ಗ್ರಾಜುಯೇಟ್ (ಪ್ರಾಥಮಿಕ) | 16,200 | - |
| | ತರಬೇತಿ ಪಡೆದ ಗ್ರಾಜುಯೇಟ್ (ಯುಪಿಎಸ್/ಮಾಧ್ಯಮಿಕ) | 20,568 (ಯುಪಿಎಸ್) | 20,568 (ಮಾಧ್ಯಮಿಕ) |
| ಉತ್ತರ ಪ್ರದೇಶ | ಶಿಕ್ಷಾ ಮಿತ್ರ | 3,500 | |
| | ಅನುದೇಶಕ್ (ಯುಪಿಎಸ್) | 7,000 | |
| ಪಂಜಾಬ್ | ಇನ್‌ಕ್ಲೂಸಿವ್ ಎಜುಕೇಶನ್ ರಿಸೋರ್ಸ್ ಟೀಚರ್ | 19,200 | |
| | ಎಸ್‌ಎಸ್‌ಎ ಪ್ರಾಥಮಿಕ | 28,000 | |
| | ಎಸ್‌ಎಸ್‌ಎ ಹಿರಿಯ ಪ್ರಾಥಮಿಕ/ಆರ್‌ಎಮ್‌ಎಸ್‌ಎ | 31,500 | 31,500 |

Source: Nine States Reports -Working Conditions of Teachers in India. TET: Teachers Eligibility Test

**ಕೋಷ್ಟಕ** ೭: ಮಧ್ಯಪ್ರದೇಶದ ಶಿಕ್ಷಕರ ವೇತನ ವ್ಯವಸ್ಥೆ (ರೂ)

| ಹಂತ | ಪ್ರಾಥಮಿಕ | | | | ಮಾಧ್ಯಮಿಕ | | | |
|---|---|---|---|---|---|---|---|---|
| | ಎಲ್‌ಡಿಐ | ಸಹಾಯಕ ಅಧ್ಯಾಪಕ್ | ಏಸ್‌ಎಸ್‌ಎ ಗ್ರೇಡ್ III | ಅತಿಥಿ ಸಹಾಯಕ್ | ಯುಡಿಟಿ | ಅಧ್ಯಾಪಕ್ | ಏಸ್‌ಎಸ್‌ಎ ಗ್ರೇಡ್ II | ಅತಿಥಿ ಸಹಾಯಕ್ |
| ವೇತನಗಳು | 5,200-20,200 + 2,400 (ಗ್ರೇಡ್ ಪೇ) | 4,500 - 25,000 +1,250 (ಗ್ರೇಡ್ ಪೇ) | 5,000 | 100 ದಿನಕ್ಕೆ | 9,300-34,800 + 3,200 (ಗ್ರೇಡ್ ಪೇ) | 4,500 - 25,000 +1,600 (ಗ್ರೇಡ್ ಪೇ) | 7,000 | 150 ದಿನಕ್ಕೆ |

Source: Noronha et al (2015)

ಅಧ್ಯಯನದಲ್ಲಿ ಕಂಡುಬಂದಂತೆ ಗುತ್ತಿಗೆ ಶಿಕ್ಷಕರ ವೇತನ ಕಡಿಮೆ ಇದೆ ಹಾಗು ವೇತನ ಪಡೆಯುವಲ್ಲಿ ವಿಳಂಬವೂ ಆಗುತ್ತದೆ. ಇವರ ವೇತನದ ವಿಳಂಬಕ್ಕೆ ಪ್ರಮುಖ ಕಾರಣವೆಂದರೆ ಇವರು ಯೋಜನೆಯಡಿ (ಎಸ್‌ಎಸ್‌ಎ/ಆರ್‌ಎಮ್‌ಎಸ್‌ಎ) ನೇಮಕ ಗೊಂಡಿರುತ್ತಾರೆ ಅಲ್ಲದೆ ಸ್ಥಳೀಯ ಜಿಲ್ಲಾ ಪರಿಷತ್‌ನಿಂದ ನೇಮಕವಾಗಿದ್ದು ಯೋಜನೆಯ ಹಣ ಬಂದಾಗ ಮಾತ್ರ ವೇತನ ಪಡೆಯುತ್ತಾರೆ. ಮಧ್ಯಪ್ರದೇಶದಲ್ಲಿ ಶಿಕ್ಷಕರು ಮತ್ತು ಸರ್ಕಾರದ ನಡುವಿನ ನಿರಂತರ ಚರ್ಚೆಯ ನಡುವೆಯೂ ಗುತ್ತಿಗೆ ಶಿಕ್ಷಕರ ವೇತನ ವ್ಯವಸ್ಥೆ ಸಂಕೀರ್ಣವಾಗಿರುವುದು ಕಂಡು ಬಂದಿದೆ. ಪ್ರಾಥಮಿಕ ಶಾಲೆಗಳ ಶಿಕ್ಷಕರು ರೂ. 5000 ಕ್ಕೆ ಮತ್ತು ಮಾಧ್ಯಮಿಕ ಅಥವಾ ಪ್ರೌಢ ಶಾಲೆಯ ಶಿಕ್ಷಕರು ಒಂದು ನಿರ್ದಿಷ್ಟ ಅವಧಿಯ ಗುತ್ತಿಗೆಗೆ ಸಂವಿಧ ಸಹ ಶಿಕ್ಷಕ್ (ಎಸ್‌ಎಸ್‌ಎ) ರಾಗಿ ನೇಮಕ ಗೊಳ್ಳುತ್ತಾರೆ. ಒಬ್ಬ ಶಿಕ್ಷಕನ ಉದ್ಯೋಗ ಮೂರು ವರ್ಷಗಳ ನಂತರ ಮುಂದುವರಿದರೆ ಶೇಕಡಾ 15 ರಷ್ಟು ನಿರ್ದಿಷ್ಟ ಮೊತ್ತದ ವೇತನ ಮುಂಬಡ್ತಿ ಸಿಗುತ್ತದೆ. ಅಧ್ಯಾಪಕ್ ಸಂವರ್ಗ್ (2007ರಲ್ಲಿ ನೇಮಕವಾದ ಪೂರ್ಣಕಾಲಿಕ) ಶಿಕ್ಷಕನ ವೇತನ, 2013ರ ವೇತನ ಪರಿಷ್ಕರಣೆ ನಂತರವೂ ಆರನೇ ವೇತನ ಆಯೋಗದ ಆಧಾರದ ಮೇಲೆ ಸ್ಥಿರ ವೇತನ ಪಡೆಯುತ್ತಿರುವ ಖಾಯಂ ಶಿಕ್ಷಕರ (1998ಕ್ಕಿಂತ ಪೂರ್ವದಲ್ಲಿ ನೇಮಕವಾದವರು) ವೇತನಕ್ಕಿಂತ ಕಡಿಮೆ ಇದೆ (ಕೋಷ್ಟಕ 7). ಆದರೂ ಮಧ್ಯಪ್ರದೇಶದ ನಗರಾಡಳಿತ ಮತ್ತು ಅಭಿವೃದ್ಧಿ ಇಲಾಖೆಯು ಅಧ್ಯಾಪಕ್ ಸಂವರ್ಗ್ (ಎಸ್‌ಎಸ್‌ಎ) ಶಿಕ್ಷಕರು 2017 ಸೆಪ್ಟಂಬರ್[9] ನಿಂದ ಖಾಯಂ ಶಿಕ್ಷಕರಂತೆ ಸಮಾನ ವೇತನ ಪಡೆಯಲಿದ್ದಾರೆ ಎಂದು ಪ್ರಕಟಿಸಿದೆ.

ಕೋಷ್ಟಕ 7 ತೋರಿಸುವಂತೆ ಅದೇ ವಿದ್ಯಾರ್ಹತೆ ಅದೇ ಹಂತದಲ್ಲಿ ಬೋಧಿಸುವ ಶಿಕ್ಷಕರ ವೇತನಗಳಲ್ಲಿ ಬಹಳ ವ್ಯತ್ಯಾಸಗಳಿವೆ. ಪ್ರಾಥಮಿಕ ಶಾಲಾ ಶಿಕ್ಷಕ (ತಿಂಗಳಿಗೆ 25 ದಿನ ಕಾರ್ಯ ನಿರ್ವಹಿಸುವ) ರ ವೇತನ ರೂ. 2500, ಎಸ್‌ಎಸ್‌ಎ III ಶಿಕ್ಷಕನಿಗೆ ತಿಂಗಳಿಗೆ ರೂ. 5000, ಅಧ್ಯಾಪಕ್ ಮಟ್ಟದ ಶಿಕ್ಷಕನಿಗೆ ರೂ. 15000, ಖಾಯಂ ಶಿಕ್ಷಕನಿಗೆ ರೂ. 35000 ದಿಂದ ರೂ. 45000 ಹೀಗೆ ಎಲ್ಲಾ ಹಂತಗಳಲ್ಲಿ ವ್ಯತ್ಯಾಸವಿದೆ. ಅಧ್ಯಾಪಕ್ ಮಟ್ಟದ ಶಿಕ್ಷಕರಿಗೆ ಸಮಾನ ವೇತನ ನೀಡುವ ಪ್ರಕ್ರಿಯೆಯ ನಡುವೆಯೇ 2017 ರ ಒಳಗೆ 7ನೇ ವೇತನ ಆಯೋಗ ಬರಲಿದ್ದು ಇದು ಮತ್ತೆ ವೇತನದ ಅಂತರವನ್ನು ಹೆಚ್ಚಿಸಬಹುದು.

**ಪ್ರಯೋಜನಗಳು/ಸೌಲಭ್ಯಗಳು:**

ತಮಿಳುನಾಡು, ಮಿಜೋರಾಂ ಮಧ್ಯಪ್ರದೇಶ ಮತ್ತು ಪಂಜಾಬ್‌ನ್ನು ಹೊರತು ಪಡಿಸಿ ಉಳಿದ ರಾಜ್ಯಗಳ ಗುತ್ತಿಗೆ ಶಿಕ್ಷಕರು ರಜೆ ಸೌಲಭ್ಯಕ್ಕೆ ಅರ್ಹರಲ್ಲ. ಮಿಜೋರಾಂ ರಾಜ್ಯದಲ್ಲಿ ಮಾತ್ರ ಗುತ್ತಿಗೆ ಶಿಕ್ಷಕರು ಅರ್ಧ ದಿವಸದ ರಜೆ ಮತ್ತು ಮಧ್ಯಂತರ ರಜೆಗೆ ಅರ್ಹರು. ಹಾಗಯೇ ಮಧ್ಯಪ್ರದೇಶದಲ್ಲಿ ಮಾತ್ರ ಗುತ್ತಿಗೆ ಶಿಕ್ಷಕರು ಪೂರ್ಣಕಾಲಿಕ ಕೋರ್ಸ್/ಪದವಿಗೆ ಸೇರಿದರೆ ವೇತನ ಸಹಿತ ರಜೆ ಸೌಲಭ್ಯಕ್ಕೆ ಅರ್ಹರು. ಖಾಯಂ ಶಿಕ್ಷಕರಿಗೆ ಇರುವ ರಜೆ ಸೌಲಭ್ಯಗಳೆಂದರೆ ಸಾಂದರ್ಭಿಕ ರಜೆ, ಗಳಿಕೆರಜೆ, ವೇತನ ಸಹಿತ, ಅರ್ಧವೇತನ, ಹೆರಿಗೆರಜೆ, ಪಿತೃತ್ವರಜೆ ಮತ್ತು ವೈದ್ಯಕೀಯ ರಜೆ. ಇವುಗಳಲ್ಲದೆ ಕೆಲವು ರಾಜ್ಯಗಳಲ್ಲಿ ಖಾಯಂ ಶಿಕ್ಷಕರು ವಿಶೇಷ ರಜೆ, ಉನ್ನತ ಪದವಿ ಅಧ್ಯಯನಕ್ಕೆ ವೇತನಸಹಿತ ಮತ್ತು ವೇತನರಹಿತ ರಜೆ ಸೌಲಭ್ಯಗಳಿಗೆ ಅರ್ಹರು. ಗುತ್ತಿಗೆ ಶಿಕ್ಷಕರಿಗೆ ತಮ್ಮ

ಜೀವನ ಪ್ರಗತಿಗೆ ಅನುಕೂಲವಾಗುವಂತಹ ಬಡ್ತಿ ಸೌಲಭ್ಯಗಳು ಕಡಿಮೆ. ಇವರು ಖಾಯಂ ಶಿಕ್ಷಕ ವಿಭಾಗದ ಭಾಗವಾಗಿದ್ದರೆ ಮಾತ್ರ ಜೀವನ–ವೃತ್ತಿ ಬೆಳವಣಿಗೆಯ ತರಗತಿಗಳಿಗೆ ಅವಕಾಶವಿದೆ. ಎಲ್ಲಾ ರಾಜ್ಯಗಳಲ್ಲಿ ಗುತ್ತಿಗೆ ಶಿಕ್ಷಕರಿಗೆ ವರ್ಗಾವಣೆಗೆ ಅವಕಾಶ ವಿಲ್ಲ. ಈ ರೀತಿಯ ವರ್ಗಾವಣೆ ನೀತಿಗಳೇ ಇಲ್ಲ. ರಾಜಸ್ಥಾನದಲ್ಲಿ 2014ರ ವರೆಗೂ ಶೇಕಡಾ 50 ರಷ್ಟು ಗುತ್ತಿಗೆ ಶಿಕ್ಷಕರಿದ್ದರೂ ಅವರಿಗಾಗಿ ವರ್ಗಾವಣೆ ನೀತಿ ಇರಲಿಲ್ಲ. ಆದರೆ ಸರಿಯಾದ ಮತ್ತು ಬಲವಾದ ಮೂಲದಿಂದ ಒತ್ತಡವಿದ್ದರೆ ವರ್ಗಾವಣೆ ಪಡೆಯಬಹುದಿತ್ತು.

**ಗುತ್ತಿಗೆ ಶಿಕ್ಷಕ ವ್ಯವಸ್ಥೆಯ ವಾಸ್ತವಾಂಶ:**
ಅಧ್ಯಯನ ನಡೆಸಿದ ರಾಜ್ಯಗಳಲ್ಲಿ ಸ್ಪಷ್ಟವಾಗಿ ಕಂಡುಬಂದ ಒಂದು ವಾಸ್ತವಾಂಶವೆಂದರೆ (ಕರ್ನಾಟಕವನ್ನು ಹೊರತು ಪಡಿಸಿ) ಯಾವ ರಾಜ್ಯದಲ್ಲೂ ನೀತಿ ರೂಪದಲ್ಲಿ ಗುತ್ತಿಗೆ ಶಿಕ್ಷಕರ ನೇಮಕಾತಿ ಸುಲಭವಾಗಿರಲಿಲ್ಲ.

**ಸಂಘಟನೆ ಮತ್ತು ನ್ಯಾಯಾಲಯ ಪ್ರಕರಣಗಳು:**_ಸಾಮಾನ್ಯವಾಗಿ ಗುತ್ತಿಗೆ ಶಿಕ್ಷಕರು ಸಂಘಟಿತರಾಗಿ ಸರ್ಕಾರಕ್ಕೆ ಸಮಸ್ಯೆ ಸೃಷ್ಟಿಸುವುದು ಕಡಿಮೆ ಎಂದು ಭಾವಿಸಲಾಗಿದೆ ಆದರೆ ವಾಸ್ತವವೇ ಬೇರೆ. ಗುತ್ತಿಗೆ ಶಿಕ್ಷಕರು ಸಂಘಟಿತರಾಗಿರುವುದು ಮಾತ್ರವಲ್ಲದೆ ನಿರಂತರವಾಗಿ ಸರ್ಕಾರದ ವಿರುದ್ಧ ನ್ಯಾಯಾಲಯಗಳಲ್ಲಿ ದಾವೆಗಳನ್ನು ಹೂಡಿದ್ದಾರೆ. ಗುತ್ತಿಗೆ ಶಿಕ್ಷಕರಿಗೆ ನೆರವಾಗುವಂತೆ ಮಧ್ಯಪ್ರದೇಶವು 1998ರಲ್ಲಿ ಖಾಯಂ ಶಿಕ್ಷಕರ ನೇಮಕಾತಿಯನ್ನು ಕೈಬಿಟ್ಟ ಮೊದಲ ರಾಜ್ಯವಾಯಿತು. ಸಮಗ್ರ ನೇಮಕಾತಿ ನೀತಿಯನ್ನು ವಿರೋಧಿಸಿ ಅತೃಪ್ತ ಶಿಕ್ಷಕ ಅಭ್ಯರ್ಥಿಗಳು ಹೇಗೆ ಕಾನೂನು ಬದ್ಧ ಪ್ರಕರಣಗಳನ್ನು ಆರಂಭಿಸಿದರು ಎಂಬುದನ್ನು ಶರ್ಮ (1999) ವಿವರಿಸಿದ್ದಾರೆ. ಹೊಸ ನೇಮಕಾತಿ ನಿಯಮ, ಸಂವಿಧಾನದ 16ನೇ ಕಲಂನಲ್ಲಿ ಸ್ಪಷ್ಟಪಡಿಸಿರುವ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ ಎಂಬುದೇ ಗುತ್ತಿಗೆ ಶಿಕ್ಷಕರ ಪ್ರಮುಖ ಆರೋಪ. ಸಂವಿಧಾನದ 16ನೇ ಕಲಂ ಉದ್ಯೋಗ ಅಥವ ನೇಮಕಾತಿಗೆ ಸಂಬಂಧಿಸಿದ ವಿಷಯಗಳಲ್ಲಿ ಎಲ್ಲಾ ನಾಗರೀಕರಿಗೂ ಸಮಾನ ಅವಕಾಶದ ಮಹತ್ವವನ್ನು ತಿಳಿಸುತ್ತದೆ. ಹಾಗೆಯೇ ಹುಟ್ಟಿದ ಸ್ಥಳ, ಜಾತಿ, ಕುಲ, ಲಿಂಗ ಮತ್ತು ಧರ್ಮದ ನೆಲೆಯಲ್ಲಿ ಯಾವ ನಾಗರಿಕನೂ ಉದ್ಯೋಗಕ್ಕೆ ಅನರ್ಹ ಎನ್ನುವಂತಿಲ್ಲ. ಗುತ್ತಿಗೆ ಶಿಕ್ಷಕರ ನೇಮಕಾತಿ ನಿಯಮ ಪಂಚಾಯತ್ ವ್ಯಾಪ್ತಿಯ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡುವ ಗುರಿ ಹೊಂದಿರುವುದರಿಂದ ಅದು ನಾಗರಿಕ ಹಕ್ಕಿನ ಉಲ್ಲಂಘನೆ ಎನ್ನಲಾಗಿದೆ. ಈ ಅಭ್ಯರ್ಥಿಗಳು ನೇಮಕಾತಿ ನಿಯಮದಲ್ಲಿನ 'ಸ್ಥಳೀಯ' ಎಂಬುದನ್ನು ಬದಲಾಯಿಸಿ ವಿಸ್ತರಿಸುವಂತೆ ಒತ್ತಾಯಿಸಿದ್ದಾರೆ.

ಮಧ್ಯಪ್ರದೇಶದ ಗುತ್ತಿಗೆ ಶಿಕ್ಷಕರು ತಮ್ಮದೇ ಆದ ಸಂಘಟನೆ ರಚಿಸಿಕೊಂಡು ಖಾಯಂ ಶಿಕ್ಷಕರಂತೆ ಸಮಾನ ವೇತನ ಮತ್ತು ಖಾಯಂ ಉದ್ಯೋಗಕ್ಕೆ ಬೇಡಿಕೆ ಇಡುತ್ತಾ ಉತ್ತಮ ಸೇವಾ ಸ್ಥಿತಿಗಾಗಿ ಪ್ರತಿಭಟನೆ ಪ್ರಾರಂಭಿಸಿದ್ದಾರೆ. ಸುಮಾರು 38000 ಗುರುಜೀಗಳು (ಗುತ್ತಿಗೆ ಶಿಕ್ಷಕರ ಒಂದು ವರ್ಗ) 2008ರ ತನಕ ನಿರಂತರ ಹೋರಾಟ ಮಾಡಿ ಉದ್ಯೋಗ ಸಕ್ರಮಕ್ಕೆ ಬೇಡಿಕೆ ಇಟ್ಟಿದ್ದರು. ದಾವೆ/ವಿವಾದಗಳು ಹಾಗು ಶಿಕ್ಷಕ ಸಂಘಟನೆಗಳ ಒತ್ತಡಕ್ಕೆ ಮಣಿದು ರಾಜ್ಯ ಸರ್ಕಾರ ವಿದ್ಯಾರ್ಹತೆ ಮತ್ತು ಸ್ಥಳೀಯ ನೇಮಕಾತಿಯಲ್ಲಿ ರಿಯಾಯತಿ ತಂದು ನೀತಿಯನ್ನು ಮರು ರೂಪಿಸಿತು. ಸಮಾನ ಕೆಲಸ–ಸಮಾನ ವೇತನಕ್ಕಾಗಿ ಕೊನೆಯ ಪ್ರತಿಭಟನೆ 2013ರಲ್ಲಿ ನಡೆಯಿತು. 12 ದಿನಗಳ ಕಾಲ ರಾಜ್ಯಾದ್ಯಂತ ಶಾಲೆಗಳು ಮುಚ್ಚಲ್ಪಟ್ಟವು. ಸರ್ಕಾರ ಹಲವು ಬೇಡಿಕೆಗಳನ್ನು ಒಪ್ಪಿಕೊಂಡಿತು. ಮುಖ್ಯವಾಗಿ ಅಧ್ಯಾಪಕ್ (ಹಿಂದೆ ಗುತ್ತಿಗೆ ಶಿಕ್ಷಕರಾಗಿದ್ದು ಈಗ ಖಾಯಂ ಶಿಕ್ಷಕರಾಗಿರುವವರಿಗೆ–1998 ಕ್ಕಿಂತ ಪೂರ್ವದಲ್ಲಿ ನೇಮಕಗೊಂಡ ಖಾಯಂ ಶಿಕ್ಷಕರಿಗಿಂತ ಕಡಿಮೆ) ಶಿಕ್ಷಕರ ವೇತನ ಹೆಚ್ಚಿಸಲು ಒಪ್ಪಿಕೊಂಡಿತು ಮತ್ತು ನಾಲ್ಕು ವರ್ಷಗಳ ಒಳಗೆ 1998 ಕ್ಕಿಂತ ಹಿಂದೆ ನೇಮಕವಾದ ಖಾಯಂ ಶಿಕ್ಷಕರಷ್ಟೇ ವೇತನ ನೀಡಲು ಒಪ್ಪಿಕೊಂಡಿತು.

2008–09 ರಲ್ಲಿ ರಾಜಸ್ಥಾನ ಸರ್ಕಾರ ಗುತ್ತಿಗೆ ಶಿಕ್ಷಕ ಯೋಜನೆಯನ್ನು ರದ್ದುಗೊಳಿಸಲು ತೀರ್ಮಾನಿಸಿತು. ಆದರೆ ಈಗಾಗಲೇ ನೇಮಕಗೊಂಡ ಗುತ್ತಿಗೆ ಶಿಕ್ಷಕರ ಭವಿಷ್ಯಕ್ಕೆ ಸ್ಪಷ್ಟ ಯೋಜನೆ ರೂಪಿಸಲು ವಿಫಲವಾಯಿತು. ರಾಜಸ್ಥಾನ ಸರ್ಕಾರದ ಈ ತೀರ್ಮಾನದ ವಿರುದ್ಧ ಬಹಳಷ್ಟು ಗುತ್ತಿಗೆ ಶಿಕ್ಷಕರು ನ್ಯಾಯಾಲಯಗಳಲ್ಲಿ ಅರ್ಜಿ ಸಲ್ಲಿಸಿದರು. ಉಚ್ಚ ನ್ಯಾಯಾಲಯವು ರಾಜ್ಯ ಸರ್ಕಾರದ ಪರವಾಗಿ ತೀರ್ಪು ನೀಡಿತು. 2014ರ ವರೆಗೆ ಯಾವ ಯೋಜನೆಯಡಿಯೂ ಹೊಸ ನೇಮಕಾತಿಗಳು ನಡೆಯಲಿಲ್ಲ (ನಾಗ್‌ಪಾಲ್ 2015). ರಾಜ್ಯಾಡಳಿತವು ಶಿಕ್ಷಕರಿಗೆ ಸಂಬಂಧಿಸಿದ ಕುಂದುಕೊರತೆಗಳಿಂದ ಮುಕ್ತವಾಗಲೇ ಇಲ್ಲ. ಗುತ್ತಿಗೆ ಶಿಕ್ಷಕರು

ತಮ್ಮ ನೇಮಕಾತಿಯನ್ನು ಸಕ್ರಮಗೊಳಿಸುವಂತೆ ನಿರಂತರವಾಗಿ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಪ್ರವೇಶಿಸುತ್ತಿದ್ದರು. ಬಹಳಷ್ಟು ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯಗಳು (ಕರ್ನಾಟಕ, ರಾಜಸ್ಥಾನ ಮತ್ತು ಉತ್ತರಪ್ರದೇಶಗಳಲ್ಲಿ) ತಾತ್ಕಾಲಿಕ ಹುದ್ದೆಗೆ ಗುತ್ತಿಗೆ ಶಿಕ್ಷಕರನ್ನು ನೇಮಿಸಿಕೊಂಡಿರುವ ರಾಜ್ಯ ಶಿಕ್ಷಣ ಇಲಾಖೆಗಳ ತೀರ್ಮಾನಗಳಲ್ಲಿ ಮಧ್ಯ ಪ್ರವೇಶ ಮಾಡಿಲಿಲ್ಲ. ರಾಜ್ಯ ಶಿಕ್ಷಣ ಇಲಾಖೆಗಳು ನ್ಯಾಯಾಲಯ ಪ್ರಕರಣಗಳಲ್ಲಿ ಜಯಿಸಿದ್ದರೂ ಇಲಾಖೆಯ ಹಿರಿಯ ಅಧಿಕಾರಿಗಳು ಬಹಳಷ್ಟು ಸಮಯವನ್ನು ವ್ಯಯಿಸಬೇಕಾಯಿತು. ಅನೇಕ ತೀರ್ಪುಗಳಲ್ಲಿ ಕಂಡುಬಂದ ಒಂದು ಸಾಮಾನ್ಯ ಅಂಶವೆಂದರೆ ಖಾಯಂ ಶಿಕ್ಷಕರಿಗೆ ಇರುವ ಹಾಗೆ ತಾತ್ಕಾಲಿಕವಾಗಿ ನೇಮಕಗೊಂಡ ಶಿಕ್ಷಕರ ಉದ್ಯೋಗ ಅಥವಾ ಸೌಲಭ್ಯಗಳ ಬಗ್ಗೆ ಯಾವದೇ ನಿಯಮಗಳಿಲ್ಲ. ಆದ್ದರಿಂದ ಈ ಶಿಕ್ಷಕರ ಬಗೆಗಿನ ನಿರ್ಧಾರಗಳನ್ನು ಅಯಾ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳಿಗೆ ಬಿಡಲಾಗಿತ್ತು (ರಾಬಿನ್ ಅಂಡ್ ಗೌರಿ 2010).

ರಾಬಿನ್ ಅಂಡ್ ಗೌರಿ (2010) ತಿಳಿಸುವಂತೆ ರಾಜ್ಯ ಉಚ್ಚ ನ್ಯಾಯಾಲಯಗಳಿಗಿಂತ ಗುತ್ತಿಗೆ ಶಿಕ್ಷಕರ ವಿಷಯದಲ್ಲಿ ಸುಪ್ರಿಂ ಕೋರ್ಟ್‌ನ ತೀರ್ಪುಗಳಲ್ಲಿ ಸ್ಪಷ್ಟತೆ ಇದೆ. ಉದಾಹರಣೆಗೆ: ಜಾರ್ಖಂಡ್‌ನಲ್ಲಿ ತರಬೇತಿ ಪಡೆಯಬಹುದು ಎಂಬ ಭರವಸೆಯ ಮೇಲೆ ಸರ್ಕಾರದಿಂದ ನೇಮಕವಾಗಿದ್ದ ತರಬೇತಿ ಇಲ್ಲದ ಶಿಕ್ಷಕರಿಗೆ ಸರ್ಕಾರವೇ ತರಬೇತಿ ನೀಡಲು ವಿಳಂಬ ಮಾಡಿದ್ದಕ್ಕೆ ದಂಡ ವಿಧಿಸುವಂತಿಲ್ಲ ಎಂದು ಹೇಳಿತು. ಹಾಗೆಯೇ ಹರಿಯಾಣ ಸರ್ಕಾರ ಖಾಯಂ ಶಿಕ್ಷಕರನ್ನು ನೇಮಿಸದೆ ಅತಿಥಿ ಶಿಕ್ಷಕರ ಮೇಲೆ ಅವಲಂಬಿತವಾಗಿದ್ದ ವಿಷಯವನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿತ್ತು (ನರೇಶ್ ಕುಮಾರ್ ಮತ್ತು ಅರಸ್ v/s ಹರಿಯಾಣ ಮತ್ತು ಅರಸ್ 2012).

**ರಾಜಕೀಕರಣ ಮತ್ತು ಭ್ರಷ್ಟಾಚಾರ:** ರಾಜ್ಯ ರಾಜಧಾನಿ ಮತ್ತು ಜಿಲ್ಲಾ ಕೇಂದ್ರದಲ್ಲಿ ಕುಳಿತು ಒಬ್ಬ ಅಧಿಕಾರಿಗಿಂತ ಸ್ಥಳೀಯ ಸರ್ಕಾರ ಮತ್ತು ಸಮುದಾಯದಿಂದ ಸ್ಥಳೀಯವಾಗಿ ನೇಮಿಸಲ್ಪಡುವ ಶಿಕ್ಷಕರನ್ನು ಸುಲಭವಾಗಿ ಹೊಣೆಗಾರರನ್ನಾಗಿಸ ಬಹುದೆಂಬ ನಿರೀಕ್ಷೆಯೇ ಖಾಯಂ ಶಿಕ್ಷಕರ ಬದಲಾಗಿ ಗುತ್ತಿಗೆ ಶಿಕ್ಷಕರನ್ನು ನೇಮಿಸಲು ಪ್ರಮುಖ ಕಾರಣ. ಆದರೆ ವರ್ಷಗಳು ಕಳೆದಂತೆ ಸ್ಥಳೀಯ ಶ್ರೀಮಂತ ವರ್ಗಗಳು ಪ್ರಾರಂಭದಿಂದಲೂ ಹೊಣೆಗಾರಿಕೆ ಎಂಬ ಉದ್ದೇಶವನ್ನು ಅಳಿಸಿಹಾಕಿ ಲಂಚದ ಮೂಲಕ ಗುತ್ತಿಗೆ ಶಿಕ್ಷಕರ ಹುದ್ದೆಗಳನ್ನು ತಮಗೆ ಬೇಕಾದ ವ್ಯಕ್ತಿಗಳಿಗೆ ಕೊಡಿಸಿರುವ ನಿದರ್ಶನಗಳು ಅನೇಕ ರಾಜ್ಯಗಳಲ್ಲಿ ಕಂಡು ಬಂದಿವೆ (ಶರ್ಮ ಮತ್ತು ರಾಮಚಂದ್ರನ್ 2009). ಈ ರೀತಿಯ ಪರಿಸ್ಥಿತಿಯು ಅಧ್ಯಯನ ಕೈಗೊಂಡ ಎಲ್ಲಾ ರಾಜ್ಯಗಳಲ್ಲೂ ಕಂಡು ಬಂದಿದೆ. ಜೊತೆಗೆ ಅಧ್ಯಯನ ನಡೆಸಿದ ಎಲ್ಲಾ ರಾಜ್ಯಗಳಲ್ಲಿ ಶಿಕ್ಷಕರ ನೇಮಕಾತಿಯ ವಿಷಯದಲ್ಲಿ ಹೊಸ ತರದ ಭ್ರಷ್ಟಾಚಾರ ವಿರುವುದು ಕಂಡು ಬಂದಿದ್ದು–ಅದು ಅವರ ಉದ್ಯೋಗ ಸಕ್ರಮಕ್ಕೆ ಸಂಬಂಧಿಸಿದ್ದು.

ಉದಾಹರಣೆಗೆ: ಮಧ್ಯಪ್ರದೇಶದಲ್ಲಿ, ಗುತ್ತಿಗೆ ಶಿಕ್ಷಕರನ್ನು ಮೂರು ವರ್ಷಗಳ ಪರವೀಕ್ಷಣಾ ಅವಧಿಗೆ ನೇಮಿಸಿ ಅವರು ಖಾಯಂ ಶಿಕ್ಷಕರಾಗುವುದಕ್ಕೆ ಮುಂಚೆ ಪರಿಣಾಮಕಾರಿ ಶಿಕ್ಷಕ ಎನ್ನಿಸಿಕೊಳ್ಳಲು ಅವರ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲಾಗುತ್ತದೆ. ಈ ಅಧ್ಯಯನ ಕಂಡುಕೊಂಡಂತೆ ಮಧ್ಯಪ್ರದೇಶದಲ್ಲಿ ಈ ಮಾನದಂಡ– ವಿಶೇಷವಾಗಿ ವಿದ್ಯಾರ್ಥಿಗಳ ಸಾಧನೆಯ ಮೌಲ್ಯಮಾಪನ ವಿಷಯದಲ್ಲಿ ವಾಸ್ತವವಾಗಿ ಆಚರಣೆಯಲ್ಲಿದೆ. ಗುತ್ತಿಗೆ ಶಿಕ್ಷಕರನ್ನು ಖಾಯಂ ಗೊಳಿಸುವ ರಾಜ್ಯಗಳಲ್ಲಿ ಇದು ಸತ್ಯ ಸಂಗತಿ. ಒಮ್ಮೆ ಗುತ್ತಿಗೆ ಶಿಕ್ಷಕರು ಒಂದು ನಿರ್ದಿಷ್ಟ ವರ್ಷಗಳ ಅವಧಿಯ ವರೆಗೆ ಸೇವೆ ಸಲ್ಲಿಸಿ ನಿಶ್ಚಿತವಾದ ವಿದ್ಯಾರ್ಹತೆ ಗಳಿಸಿದ ನಂತರ ಅವರು ಖಾಯಂ ಶಿಕ್ಷಕರಾಗುತ್ತಾರೆ. ಆದರೆ ಶಿಕ್ಷಕರ ನಿಜವಾದ ಬೋಧನಾ ಸಾಧನೆಯ ಮೌಲ್ಯಮಾಪನವೆ ಇಲ್ಲ. ಅಧ್ಯಯನದ ಗುಣಾತ್ಮಕ ಅಂಶಗಳ ಆಧಾರದ ಪ್ರಕಾರ ಗುತ್ತಿಗೆ ಶಿಕ್ಷಕರು ನಿರಂತರವಾಗಿ ಖಾಯಂ ಗೊಳ್ಳುತ್ತಿದ್ದಾರೆ. ಆದರೆ ಇದು ಅವರು ಅವಶ್ಯಕವಾದ ವಿದ್ಯಾರ್ಹತೆ ಪಡೆದಿದ್ದಾರೆ ಎಂಬ ಕಾರಣಕ್ಕೆ ಅಲ್ಲ. ಬದಲಾಗಿ ಅದು ಅವರ ರಾಜಕೀಯ ಸಂಪರ್ಕ ಮತ್ತು ಲಂಚ ನೀಡಿದ್ದಾರೆ ಎಂಬ ಕಾರಣಕ್ಕೆ (ಶರ್ಮ ರಾಮಚಂದ್ರನ್ 2009). ಗುತ್ತಿಗೆ ಶಿಕ್ಷಕರು ಖಾಯಂ ಶಿಕ್ಷಕರಂತೆ ಮತ ಬ್ಯಾಂಕುಗಳಾಗಿದ್ದಾರೆ. ಉದಾಹರಣೆಗೆ: ರಾಜಸ್ಥಾನ ಮತ್ತು ಜಾರ್ಖಂಡ್ ನಲ್ಲಿ ಚುನಾವಣೆಯ ಸಮಯದಲ್ಲಿ ನಡೆದ ಗುತ್ತಿಗೆ ಶಿಕ್ಷಕರ ನೇಮಕಾತಿ ದೊಡ್ಡ ಸಂಚಲನ ಸೃಷ್ಟಿಸಿತು.

**ರಿಯಾಯಿತಿಗಳು ಮತ್ತು ಪದವಿಗಳು:**

ಹಲವು ರಾಜ್ಯಗಳಲ್ಲಿನ ಗುತ್ತಿಗೆ ಶಿಕ್ಷಕರ ನೇಮಕಾತಿ ಪದ್ಧತಿಯಿಂದ ಅನರ್ಹರು ಶಿಕ್ಷಕರಾಗಿ ಆಯ್ಕೆಗೊಂಡು ನಂತರ ಸೂಕ್ತ ವಿದ್ಯಾರ್ಹತೆ ಇಲ್ಲದಿದ್ದರೂ ಅವರಿಗೆ ರಿಯಾಯತಿ ನೀಡುವಂತಾಗಿದೆ. 2014ರಲ್ಲಿ ಬಿಹಾರದಲ್ಲಿ ಸುಳ್ಳು ಪತ್ರಗಳು ಮತ್ತು ದಾಖಲೆಗಳ ಮೇಲೆ ನೇಮಕವಾಗಿದ್ದ 1137 ಗುತ್ತಿಗೆ ಶಿಕ್ಷಕರನ್ನು ಸೇವೆಯಿಂದ ವಜಾ ಮಾಡಲಾಗಿತ್ತು (ಟಿಓಐ 2014). ಈ ರಾಜ್ಯದಲ್ಲಿ 2006 ರಿಂದ 2011 ರವರೆಗೆ 225000 ಗುತ್ತಿಗೆ ಶಿಕ್ಷಕರನ್ನು ಪಂಚಾಯತ್ ಗಳಿಂದ ನೇಮಕ ಮಾಡಲಾಗಿತ್ತು. ಇತ್ತೀಚಗೆ ರಾಜ್ಯ ಸರ್ಕಾರ ಮೂರು ಲಕ್ಷಕ್ಕೂ ಅಧಿಕ ಗುತ್ತಿಗೆ ಶಿಕ್ಷಕರನ್ನು ಅವರ ಶೈಕ್ಷಣಿಕ ಮತ್ತು ವೃತ್ತಿಪರ ಪದವಿಗಳನ್ನು ಪರಿಶೀಲಿಸದೇ ನೇಮಕ ಮಾಡಿದ್ದನ್ನು ಒಪ್ಪಿಕೊಂಡಿತು (ಟಿಓಐ 2015). ಪಂಜಾಬ್ ನಲ್ಲಿ 2013ರಲ್ಲಿ ನೇಮಕಗೊಂಡ 1272 ಅಭ್ಯರ್ಥಿಗಳಲ್ಲಿ 515 ಅಭ್ಯರ್ಥಿಗಳು ಪ್ರಾಥಮಿಕ ಶಿಕ್ಷಕರ ತರಬೇತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು, ನೇಮಕಗೊಂಡವರಲ್ಲಿ 717 ಅಭ್ಯರ್ಥಿಗಳು ಬಿ.ಎಡ್ ವಿದ್ಯಾರ್ಹತೆ ಹೊಂದಿದ್ದರು. ಈ 717 ಅಭ್ಯರ್ಥಿಗಳಲ್ಲಿ ಕೇವಲ 615 ಜನ ವೃತ್ತಿಗೆ ಸೇರಿಕೊಂಡರು. ಹಾಗಯೇ ಆರು ತಿಂಗಳಲ್ಲಿ ಶಿಕ್ಷಕರ ರಾಷ್ಟ್ರೀಯ ಪರಿಷತ್ತಿನಿಂದ ಮಾನ್ಯತೆ ಪಡೆದ (ಎನ್‌ಸಿಟಿಇ) ತರಬೇತಿಯನ್ನು ಪೂರ್ಣ ಗೊಳಿಸಿದ ನಂತರ 615 ಶಿಕ್ಷಕರ ಗುತ್ತಿಗೆಯನ್ನು ನವೀಕರಿಸಲಾಗುತ್ತದೆ ಎಂದು ಹೇಳಲಾಗಿತ್ತು. 615 ಶಿಕ್ಷಕರಲ್ಲಿ ರಲ್ಲಿ ಇಬ್ಬರು ಮಾತ್ರ ಪ್ರಾಥಮಿಕ ಶಿಕ್ಷಕ ತರಬೇತಿ ಪರೀಕ್ಷೆಯನ್ನು ಪೂರ್ಣ ಗೊಳಿಸಿದ್ದರು. ಉಳಿದವರು ಮತ್ತೆ ಇದೇ ಪರೀಕ್ಷೆಯನ್ನು ನಡೆಸುವಂತೆ ಮಾಧ್ಯಮಿಕ ಶಿಕ್ಷಣ ಮತ್ತು ಸಾಮಾನ್ಯ ಇಲಾಖೆಯನ್ನು ಒತ್ತಾಯಿಸುತ್ತಿದ್ದರು. ಇಲಾಖೆಯು ಮತ್ತೆ ಸಂಪರ್ಕ ತರಬೇತಿ ಅಥವ ಪರೀಕ್ಷೆಯನ್ನು ಪೂರ್ಣಗೊಳಿಸುವ ಕೊನೆ ದಿನಾಂಕವನ್ನು 2015ರ ಮಾರ್ಚ್‌ವರೆಗೂ ವಿಸ್ತರಿಸಿತು. ಇದರ ನಡುವೆ ಈ ಶಿಕ್ಷಕರು ಪೂರ್ಣ ವಿದ್ಯಾರ್ಹತೆ ಇಲ್ಲದಿದ್ದರೂ ಬೋಧನೆ ಕೆಲಸವನ್ನು ಮುಂದುವರಿಸಿದರು. ಒಂಭತ್ತು ಅಧ್ಯಯನ ರಾಜ್ಯಗಳಲ್ಲಿ ನಡೆದ ರಾಜ್ಯಮಟ್ಟದ ಚರ್ಚೆಗಳಲ್ಲಿ ಶಿಕ್ಷಕ ಸಂಘಟನೆಯ ಮುಖಂಡರು ಮತ್ತು ಶಿಕ್ಷಕರು, ಉದ್ಯೋಗ ಸಕ್ರಮಕ್ಕೆ ಬೇಕಾದ ಅಧಿಕೃತ ಪದವಿಗಳು ಮತ್ತು ಡಿಪ್ಲೋಮಗಳನ್ನು ಸುಲಭವಾಗಿ ಪಡೆಯಬಹುದಾದುದರ ಬಗ್ಗೆ ತಿಳಿಸಿದರು. ಪಂಜಾಬ್‌ನ ಇತ್ತೀಚನ ಪ್ರಕರಣವೊಂದರಲ್ಲಿ ಬಹಳಷ್ಟು ಶಿಕ್ಷಕ ಅಭ್ಯರ್ಥಿಗಳು ನಕಲಿ ಪದವಿಗಳನ್ನು ಪಡೆದಿರುವುದು ಕಂಡು ಬಂದಿದೆ.[10] ಜಾರ್ಖಂಡ್‌ನಲ್ಲಿ ಶಿಕ್ಷಕರು ಪದವಿ ಪಡೆಯುವ ಮಾರುಕಟ್ಟೆಗಳ ಬಗ್ಗೆ ಮಾತನಾಡುತ್ತಾ ಶಿಕ್ಷಕರ ಪರವಾಗಿ ಬದಲೀ ವ್ಯಕ್ತಿಗಳು ಪರೀಕ್ಷೆ ಬರೆಯುತ್ತಾರೆ ಎಂದಿದ್ದಾರೆ. ಬೇರೆ ರಾಜ್ಯಗಳಲ್ಲಿನ ಇದೇ ರೀತಿಯ ಅನುಭವಗಳನ್ನು ವಿವರಿಸಲಾಗಿದೆ. ಮಿಜೋರಾಂನಲ್ಲಿ ಗುತ್ತಿಗೆ ಶಿಕ್ಷಕರಿಗೆ ಅಗತ್ಯ ಪರೀಕ್ಷೆಗಳನ್ನು ಪೂರ್ಣಗೊಳಿಸಲು ಹಲವು ಅವಕಾಶಗಳನ್ನು ನೀಡಲಾಗಿದೆ. ಮೇಲೆ ವಿವರಿಸಿದ ಈ ಚಟುವಟಿಕೆಗಳು ಗುತ್ತಿಗೆ ಶಿಕ್ಷಕರಲ್ಲಿ ಗುಣಮಟ್ಟ ತರುವುದು ಎಷ್ಟು ಕಷ್ಟ ಎಂಬುದರ ಬಗ್ಗೆ ತಿಳಿಸುತ್ತವೆ.

**ಆಡಳಿತಾತ್ಮಕ ತೊಡಕುಗಳು:** ಶಿಕ್ಷಕರ ವಿವಿಧ ವೃಂದಗಳನ್ನು ನಿರ್ವಹಿಸುವುದು ರಾಜ್ಯಗಳಿಗೆ ಸಮಸ್ಯಾತ್ಮಕವಾಗಿ ಕಂಡಿದೆ. ಒಂದೇ ರೀತಿಯ ಕೆಲಸಕ್ಕೆ ಈಗಿರುವ ಶಿಕ್ಷಕರ ವಿವಿಧ ವೃಂದಗಳನ್ನು ವಿವಿಧ ಇಲಾಖೆಗಳು ನಿರ್ವಹಿಸುವುದು ಸಂಕೀರ್ಣ ಮತ್ತು ಗೊಂದಲವನ್ನು ಸೃಷ್ಟಿಸಿ ಅನುಷ್ಠಾನ ಕಾರ್ಯದಲ್ಲಿ ಅತಿಯಾದ ವಿಳಂಬವನ್ನು ಉಂಟು ಮಾಡುತ್ತಿದೆ. ಉದಾಹರಣೆಗೆ ನೊರೊನ್ಹಾ (ಸಂಪಾದಿತ– 2015) ಗುರುತಿಸಿದಂತೆ ಗುತ್ತಿಗೆ ಶಿಕ್ಷಕರ (ಸಂವಿದ ಸಹ ಶಿಕ್ಷಕ್) ಮತ್ತು ಖಾಯಂ ಶಿಕ್ಷಕರ ಹೊಸ ವೃಂದದ (ಅಧ್ಯಾಪಕ್ ಸಂವರ್ಗ) ನೇಮಕ ಪ್ರಕ್ರಿಯೆ ಅತ್ಯಂತ ಸಂಕೀರ್ಣವಾಗಿದೆ. ಶಾಲಾ ಶಿಕ್ಷಣ ಇಲಾಖೆ ಮತ್ತು ಆದಿವಾಸಿ ಕಲ್ಯಾಣ ಇಲಾಖೆಯು ನೇಮಕಾತಿ ಪ್ರಕ್ರಿಯೆಯನ್ನು ನಿರ್ವಹಿಸುತ್ತಿವೆ ಆದರೆ ಒಂದು ಶಾಲೆಯ ನಿಜವಾದ ನೇಮಕಾತಿಯನ್ನು ಸ್ಥಳೀಯ ಸಂಸ್ಥೆಯು ಮಾಡುತ್ತದೆ ಮತ್ತು ಇದರ ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆಯೇ ವಹಿಸುತ್ತದೆ. ನೇಮಕಾತಿಯಲ್ಲಿನ ಅದಕ್ಷತೆ ಮತ್ತು ಗೊಂದಲವನ್ನು ಒಂದು ವಾಸ್ತವ ಸಂಗತಿಯ ಮೂಲಕ ವಿವರಿಸುವುದಾದರೆ ಶಿಕ್ಷಕರ ಅರ್ಹತಾ ಪರೀಕ್ಷೆಯ (ಟಿಇಟಿ) ಆಧಾರದ ಮೇಲೆ ನಡೆಯುವ ಮೊದಲ ಹಂತದ ನೇಮಕಾತಿಗೆ ಎರಡು ವರ್ಷ ತೆಗೆದುಕೊಂಡ ನಂತರವೂ ಇನ್ನೂ 50000 ಸಾವಿರ ಹುದ್ದೆಗಳು ಖಾಲಿ ಇದ್ದವು. ಮುಂದೆ ಏಪ್ರಿಲ್ ಮತ್ತು ಆಗಸ್ಟ್ ನಡುವೆ ಸುಮಾರು 25000 ಸಾವಿರ ಹುದ್ದೆಗಳು ಕಡಿಮೆಯಾದವು. ಈ ರೀತಿಯ ನೇಮಕಾತಿಯ ವಿಳಂಬ ಅಥವ ಅಂತರಕ್ಕೆ ಪ್ರಮುಖ ಕಾರಣಗಳೆಂದರೆ (I) ತರಬೇತಿ ಹೊಂದಿದ ಶಿಕ್ಷಕರ ಅಲಭ್ಯತೆ ಮತ್ತು ಟಿಇಟಿ ಮಾಡಿದ್ದವರ ಪ್ರಮಾಣ ಕಡಿಮೆ (II) ಎಸ್‌ಎಸ್‌ಎ ವರ್ಗ II ಮತ್ತು I ಶಿಕ್ಷಕರಿಗೆ ವಿಷಯ ಜ್ಞಾನಕ್ಕಾಗಿ ಪರೀಕ್ಷೆ ನಡೆಸಲಾಯಿತು ಮತ್ತು ಇಂಗ್ಲೀಷ್, ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಸರಿಯಾದ ಅಭ್ಯರ್ಥಿಗಳು ದೊರೆಯಲಿಲ್ಲ. ಈ ವಿಷಯಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಸಹ (ಎಸ್‌ಸಿ ಮತ್ತು ಎಸ್‌ಟಿ ಮಾತ್ರವಲ್ಲದೆ) ಕಡಿಮೆ ಸಂಖ್ಯೆಯಲ್ಲಿದ್ದರು. ಮುಖ್ಯವಾಗಿ ಏಪ್ರಿಲ್ ಮತ್ತು ಆಗಸ್ಟ್ ತಿಂಗಳ ನಡುವಿನ ಸಂಖ್ಯೆಗಳಲ್ಲಿನ ದೊಡ್ಡ ಮಟ್ಟದ ಅಂತರದಿಂದ ತಿಳಿದು ಬರುವುದೆಂದರೆ ಕೆಲಸಕ್ಕೆ ಸೇರಿದವರು ಸಹ ಇದಕ್ಕಿಂತ ಉತ್ತಮ ಅವಕಾಶಗಳು ಸಿಕ್ಕರೆ ಕೆಲಸ ಬಿಡುತ್ತಿದ್ದರು ಎಂಬುದು.

**ಚರ್ಚೆ: ಸಕ್ರಮ ಪ್ರವೃತ್ತಿ?**

1900ರ ಅಂತ್ಯ ಮತ್ತು 2000ದ ಪ್ರಾರಂಭಕ್ಕೆ ರಾಜ್ಯಗಳಲ್ಲಿ ಒಂದು–ಎರಡು ವರ್ಷಗಳಿಗೆ ಗುತ್ತಿಗೆ ಶಿಕ್ಷಕರನ್ನು ನೇಮಿಸುವ ಪ್ರವೃತ್ತಿ ಹೆಚ್ಚಾಗಿದ್ದಾಗ ಕೆಲವು ರಾಜ್ಯಗಳಲ್ಲಿ ಇದಕ್ಕೆ ವಿರುದ್ಧವಾದ ಪರಿಸ್ಥಿತಿ ಇತ್ತು. ಅನೇಕ ರಾಜ್ಯಗಳಲ್ಲಿ ಗುತ್ತಿಗೆ ಶಿಕ್ಷಕರನ್ನು ನೇಮಿಸುವ ಕಾರ್ಯ ಮುಂದುವರಿದರೂ ಹೆಚ್ಚುವರಿ ವಿದ್ಯಾರ್ಹತೆ ಮತ್ತು/ಅಥವಾ ಸೇವೆ ಸಲ್ಲಿಸಿದ ವರ್ಷಗಳ ಆಧಾರದ ಮೇಲೆ ಅವರ ಸೇವೆಯನ್ನು ಸಕ್ರಮಗೊಳಿಸುವ ಪ್ರವೃತ್ತಿಯೂ ಹೆಚ್ಚಾಯಿತು. ಮಧ್ಯಪ್ರದೇಶದಲ್ಲಿ ಮೊದಲ ಮೂರು ವರ್ಷಗಳಿಗೆ ಗುತ್ತಿಗೆ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುತ್ತಿತ್ತು ಆ ನಂತರ ಅವರು ಸೇವಾ ಸಕ್ರಮಕ್ಕೆ ಅರ್ಹರಾಗುತ್ತಿದ್ದರು. ಅದೇ ರೀತಿ ಒಡಿಸ್ಸಾದಲ್ಲಿ ಆರು ವರ್ಷಗಳ ಸೇವೆಯ ನಂತರ ಗುತ್ತಿಗೆ ಶಿಕ್ಷಕರ ಸೇವೆಯನ್ನು ಸಕ್ರಮಗೊಳಿಸಲಾಗುತ್ತಿತ್ತು. ಉತ್ತರಪ್ರದೇಶದಲ್ಲಿ ಸರ್ಕಾರ ಗುತ್ತಿಗೆ ಶಿಕ್ಷಕರ ನೇಮಕವನ್ನು ನಿಲ್ಲಿಸಲು ನಿರ್ಧರಿಸಿತು.

ಬಹಳಷ್ಟು ರಾಜ್ಯಗಳಲ್ಲಿ ಗುತ್ತಿಗೆ ಶಿಕ್ಷಕರಾಗಲು ವಿದ್ಯಾರ್ಹತೆಯನ್ನು ಹೆಚ್ಚಿಸುವ ಪ್ರವೃತ್ತಿ ಇದೆ. ಉದಾಹರಣೆಗೆ ಜಾರ್ಖಂಡ್‌ನಲ್ಲಿ ಗುತ್ತಿಗೆ ಮತ್ತು ಖಾಯಂ ಶಿಕ್ಷಕರ ನೇಮಕಾತಿಯ ನಿಯಮಗಳಲ್ಲಿ ವ್ಯತ್ಯಾಸವಿಲ್ಲ.

ಸೇವೆ ಸಕ್ರಮ ಅಥವ ಖಾಯಂ ಗೊಳಿಸುವ ಪ್ರಕ್ರಿಯೆ ಮತ್ತು ಗುತ್ತಿಗೆ ಶಿಕ್ಷಕರ ನಡುವೆ ಸಮಾನ ವಿದ್ಯಾರ್ಹತೆ ತರುವ ಪ್ರವೃತ್ತಿಯಲ್ಲಿ ತಾಂತ್ರಿಕ, ರಾಜಕೀಯ ಮತ್ತು ಶಾಸನಾತ್ಮಕ ಒತ್ತಡಗಳಿವೆ. 2009ರ ಆರ್‌ಟಿಇ ಮತ್ತು ಶಿಕ್ಷಕರಿಗೆ ಸಂಬಂಧಿಸಿದ ಎನ್‌ಸಿಟಿಇ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಎಲ್ಲಾ ಶಿಕ್ಷಕರು ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಸಮಾನ ಕೆಲಸಕ್ಕೆ ಸಮಾನ ವಿದ್ಯಾರ್ಹತೆ ಎಂಬ ವಾದವನ್ನು ಎನ್‌ಸಿಟಿಇ ನಿಯಮಗಳು ಬಲಗೊಳಿಸಿವೆ. ಮಧ್ಯಪ್ರದೇಶದ ದುಬೆ ಸಮಿತಿಯ ವರದಿಯು ಶಿಕ್ಷಕರ ಸೇವೆ ಸಕ್ರಮಾತಿ ಬಗ್ಗೆ ಪ್ರಮುಖ ಕೊಡುಗೆ ನೀಡಿದೆ. ಈ ವರದಿಯು ಶಿಕ್ಷಕ ವೃತ್ತಿ–ವರ್ಗವನ್ನು ಪುನರ್ ರೂಪಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಸರ್ಕಾರ ಈ ಸಮಿತಿಯ ಬಹುತೇಕ ಶಿಫಾರಸ್ಸುಗಳನ್ನು ಸ್ವೀಕರಿಸಿದೆ ಮತ್ತು 2008 ರ ಅಧ್ಯಾಪಕ್ ಸಂವರ್ಗ್ ಕೇಡರ್ ನಿಯಮ ಎಂದೇ ಪ್ರಕಟಿಸಿದೆ. ಹಲವು ರಾಜ್ಯಗಳಲ್ಲಿ ಪ್ರಧಾನವಾಗಿ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಉತ್ತರಪ್ರದೇಶ್ ಗಳಲ್ಲಿ ಎಲ್ಲಾ ಶಿಕ್ಷಕರನ್ನು ಸಮಾನವಾಗಿ ನಡೆಸಿಕೊಳ್ಳಬೇಕು ಎಂಬ ಶಿಕ್ಷಕ ಸಂಘಟನೆಗಳ ಒತ್ತಡ ಸೇವೆ ಸಕ್ರಮೀಕರಣಕ್ಕೆ ಹೆಚ್ಚಿನ ಕೊಡುಗೆ ನೀಡಿದೆ. ಅಂತಿಮವಾಗಿ ರಾಜಸ್ಥಾನದಲ್ಲಿ ಶಿಕ್ಷಕರ ಅಹವಾಲು ಅಥವಾ ಸಾರ್ವಜನಿಕ ಹಿತಾಸಕ್ತಿ ದಾವೆಯ ಆಧಾರದ ಮೇಲೆ ಉಚ್ಚ ನ್ಯಾಯಾಲಯ ಖಾಯಂ ಶಿಕ್ಷಕರ ಪರವಾದ ನೀತಿಯ ಬಗ್ಗೆ ತೀರ್ಪು ನೀಡಿದೆ. ಆದರೂ ಅನೇಕ ರಾಜ್ಯಗಳಲ್ಲಿ (ಜಾರ್ಕಂಡ್, ಪಂಜಾಬ್) ತಮ್ಮ ನೇಮಕಾತಿ ನಿಯಮಗಳನ್ನು ಇನ್ನೂ ಪರಮಾರ್ಶಿಸಿಲ್ಲ.

ಈ ಅಧ್ಯಯನದಲ್ಲಿ ಕಂಡು ಬಂದಂತೆ ಯಾವ ರಾಜ್ಯಕ್ಕೂ ಗುತ್ತಿಗೆ ಶಿಕ್ಷಕರೊಂದಿಗಿನ ಪ್ರಯಾಣ ಸುಲಭವಾದದ್ದಲ್ಲ ಮತ್ತು ಶಿಕ್ಷಕರ ನೈತಿಕ ಉತ್ಸಾಹ, ವಿದ್ಯಾರ್ಥಿಗಳ ಕಲಿಕೆ ಮತ್ತು ಆಡಳಿತಾತ್ಮಕ ಸಮಯದ ರೂಪದಲ್ಲಿ ವ್ಯವಸ್ಥೆಯೇ ವೆಚ್ಚವನ್ನು ಭರಿಸಿದೆ ಎನ್ನಬಹುದು. ಎರಡು ವಿಷಯಗಳು ನಮ್ಮ ಕ್ಷೇತ್ರ ಭೇಟಿಯ ಸಮಯದಲ್ಲಿ ಮತ್ತೆ ಮತ್ತೆ ಮುಖ್ಯವಾಗಿ ಕಂಡು ಬಂದಿವೆ ಮತ್ತು ಗಮನ ಹರಿಸಬೇಕಾದಂತಹುವುಗಳಾಗಿವೆ. (1) ಗುತ್ತಿಗೆ ಶಿಕ್ಷಕರ ನೇಮಕಾತಿಯು ಸಾಮಾನ್ಯವಾಗಿ, ಆಡಳಿತಗಾರರು ಶಿಕ್ಷಕರ ಬಗ್ಗೆ ಹೊಂದಿದ್ದ ಮನೋಭಾವವನ್ನು ಬದಲಾಯಿಸಿದೆ. ಅಧಿಕಾರಶಾಹಿಯ ಏಣಿಶ್ರೇಣಿಯಲ್ಲಿ ಶಿಕ್ಷಕರು ಅತ್ಯಂತ ಕೆಳಗಿನ ಮೆಟ್ಟಿಲು ಎಂದು ಗ್ರಹಿಸಲಾಗಿದೆ. 1990ರ ನಂತರ ವಿಶೇಷವಾಗಿ ಸರ್ಕಾರ ಅರ್ಹತೆ ಇಲ್ಲದ ಯುವಕರನ್ನು ಗುತ್ತಿಗೆ ಶಿಕ್ಷಕರನ್ನಾಗಿ ನೇಮಿಸಲು ಪ್ರಾರಂಭಿಸಿದ್ದಾಗಿನಿಂದ ಸಮಾಜದಲ್ಲಿ ಶಿಕ್ಷಕರು ಹೊಂದಿದ್ದ ಗೌರವ ನಾಶವಾಗಿದೆ. ಶಿಕ್ಷಕರ ವೃತ್ತಿ ಬೆಳವಣಿಗೆಯು ಅವ್ಯವಸ್ಥೆಯಿಂದ ಕೂಡಿದೆ. ಹಂತ ಹಂತವಾಗಿ ಶಿಕ್ಷಕರು ಸಮಾಜದ ಮುಖ್ಯ ಭಾಗ ಎಂಬುದನ್ನು ನಿರ್ಲಕ್ಷಿಸಲಾಗುತ್ತಿದೆ. (2) ಇಲ್ಲಿನ ವೇತನವು ಕೌಶಲ ಇಲ್ಲದ ಕೆಲಸಗಾರರಿಗೆ ನಿಗದಿಯಾಗಿರುವ ಕನಿಷ್ಠ ಕೂಲಿಗಿಂತಲೂ ಕಡಿಮೆ ಇರುವುದರಿಂದ ಯುವಕರು ಈ ವೃತ್ತಿಗೆ ಬರಲು ಮನಸ್ಸು ಮಾಡುತ್ತಿಲ್ಲ.

ಗುತ್ತಿಗೆ ಶಿಕ್ಷಕರ ಪದ್ದತಿ ಬರುವುದಕ್ಕಿಂತ ಪೂರ್ವದಲ್ಲಿ ನೇಮಕವಾಗಿದ್ದ ಶಿಕ್ಷಕರು ನಿವೃತ್ತಿ ಹೊಂದಲು ಪ್ರಾರಂಭವಾಗಿದ್ದು ಆ ಹುದ್ದೆಗಳನ್ನು ಭರ್ತಿಮಾಡುವಾಗ ರಾಜ್ಯ ಸರ್ಕಾರಗಳು ಎಚ್ಚರಿಕೆಯಿಂದ ಯೋಚಿಸಬೇಕಾಗಿದೆ. ಆರ್ಥಿಕ ಸಂಖ್ಯಾ ಆಧಾರಗಳು ತಿಳಿಸುವಂತೆ ಗುತ್ತಿಗೆ ಶಿಕ್ಷಕರು ಅಲ್ಪಾವಧಿಯಲ್ಲಿ ಕಷ್ಟ ಪಟ್ಟು ದುಡಿಯುವ ಉತ್ಸಾಹ ತೋರಿಸಬಹುದು ಆದರೆ ಸೇವಾ ಸಕ್ರಮದ

ಭರವಸೆ ಇಲ್ಲದಿದ್ದರೆ ದೀರ್ಘಾವಧಿಯಲ್ಲಿ ಇದೇ ರೀತಿ ಉತ್ಸಾಹ ತೋರಿಸುತ್ತಾರೆ ಎಂದು ಹೇಳುವ ಆಧಾರಗಳು ಕಡಿಮೆ. ರಾಬಿನಸನ್ ಮತ್ತು ಗೌರಿ (2010) ಗುರುತಿಸುವಂತೆ ಸಂಘಟನಾತ್ಮಕ ಮನಃಶಾಸ್ತ್ರ, ಪ್ರಯೋಗಾತ್ಮಕ ಅರ್ಥಶಾಸ್ತ್ರ ಮತ್ತು ಸಮಗ್ರ ಅರ್ಥಶಾಸ್ತ್ರದ ಆಧಾರಗಳಿಂದ ತಿಳಿದು ಬರುವಂತೆ ವ್ಯಕ್ತಿಗಳನ್ನು ನ್ಯಾಯಯುತವಾಗಿ ನಡೆಸಿಕೊಳ್ಳಬೇಕು ಮತ್ತು ಅವರು ಜೀವನ ಭದ್ರತೆಯ ಯೋಜನೆಯನ್ನು ರೂಪಿಸಿಕೊಳ್ಳಲು ಬಯಸುತ್ತಾರೆ ಇಲ್ಲದಿದ್ದರೆ ಅವರಿಗೆ ತಮ್ಮ ಕೆಲಸಗಳಲ್ಲಿ ಬದ್ಧತೆ ಇರುವುದಿಲ್ಲ. ವ್ಯಕ್ತಿಗಳು ತಮ್ಮ ಸ್ವಂತ ಜೀವನದ ಬಗ್ಗೆ ವಿಶ್ವಾಸವಿದ್ದರೆ ಬೇರೆಯವರನ್ನು ವಿಶ್ವಾಸದಿಂದ ನೋಡುತ್ತಾರೆ. ಇನ್ನೊಂದು ಮುಖ್ಯ ವಿಷಯವೆಂದರೆ ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಅನುಕೂಲವಾಗುವ ಚಟುವಟಿಕೆಗಳ ಮೇಲೆ ಹೂಡಿಕೆ ಮಾಡಿ, ಅವರು ತಮ್ಮ ಸಹೋದ್ಯೋಗಿಗಳೊಂದಿಗೆ ಸಹಮತದಿಂದ ಕಾರ್ಯನಿರ್ವಹಿಸುವಂತೆ ಪ್ರೇರೇಪಿಸಬಹುದು. ಆದರೆ ಶಿಕ್ಷಕರು ಗುತ್ತಿಗೆ ಮೇಲಿದ್ದು ತಾವು ವ್ಯವಸ್ಥೆಯ ಮುಖ್ಯ ಭಾಗವಲ್ಲ ಎಂದು ಭಾವಿಸಿದರೆ ಈ ರೀತಿ ಪ್ರೇರೇಪಿಸುವುದು ಕಷ್ಟ. ಆದ್ದರಿಂದ ನೀತಿ ರೂಪಿಸುವವರ ಪ್ರಮುಖ ಸವಾಲು ಎಂದರೆ ಹೊಸ ಶಿಕ್ಷಕರ ಜೀವನ ಪ್ರಗತಿಗೆ ಅನುಕೂಲವಾಗುವ, ಸ್ಪೂರ್ತಿ ಹೊಂದಿದ ಮತ್ತು ಪರಿಣಾಮಕಾರಿ ಶಿಕ್ಷಕರು ಈ ವೃತ್ತಿಯಲ್ಲಿ ಉಳಿಯುವಂತೆ ಮಾಡುವ ಅವಕಾಶಗಳನ್ನು ಸೃಷ್ಟಿಸಬೇಕಾಗಿದೆ. ಹಾಗೆಯೇ ಅವರ ಕೌಶಲ್ಯ ಸುಧಾರಿಸಿ ಅವರಲ್ಲಿ ವಿದ್ಯಾರ್ಥಿಗಳ ಕಲಿಕೆ ಸುಧಾರಿಸಬೇಕೆಂಬ ಜವಾಬ್ದಾರಿಯ ಭಾವನೆ ಮೂಡಿಸುವಂತಿರಬೇಕು.

**ಟಿಪ್ಪಣಿಗಳು**

1. ರಾಜ್ಯ, ಸಮಯ ಮತ್ತು ಹಣಕಾಸಿನ ಮೂಲದ ಆಧಾರದ ಮೇಲೆ ಗುತ್ತಿಗೆ ಶಿಕ್ಷಕರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಆಂದರೆ ಹಂಗಾಮಿ ಶಿಕ್ಷಕರು, ತಾತ್ಕಾಲಿಕ ಶಿಕ್ಷಕರು ಮತ್ತು ಅತಿಥಿ ಶಿಕ್ಷಕರು ಇತ್ಯಾದಿ. ಹಾಗೆಯೇ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಡಿ ಅನೇಕ ಹೆಸರುಗಳನ್ನು ನೀಡಲಾಗಿದೆ.

2. "ಪಂಜಾಬ್‌ನ ಶಿಕ್ಷಕಿಯೊಬ್ಬಳು ಧಗಧಗಿಸುವ ಬೆಂಕಿಯಲ್ಲಿ ಸಾವನ್ನಪ್ಪುತ್ತಾಳೆ" 8 ಫೆಬ್ರವರಿ 2010, ಮಾಹಿತಿ ಇಲ್ಲಿ ಲಭ್ಯ at:htpp//www.ndtv.com/cities/panjab-teacher-dies-after-setting-herself-ablaze-410587

3."ಛತ್ತೀಸ್‌ಗರ್‌ನಲ್ಲಿ ಅಮಾನತ್ತಾದ 35000 ಶಿಕ್ಷಕರ ಪುನರ್ ನೇಮಕ" ಈ ಮಾಹಿತಿಯು ಕೆಳಗಿನ ವೆಬ್‌ಸೈಟ್‌ನಲ್ಲಿ ಲಭ್ಯ at:http//zeenews.india.com/news/chattisghar/35000-suspended-contract-teachers-to-be-reinstated-in-chattisghar

4. ಈ ಮಾಹಿತಿಯು ಜಿಲ್ಲಾ ಶೈಕ್ಷಣಿಕ ವ್ಯವಸ್ಥೆಯಿಂದ ಬಂದಿದ್ದು, 2000ನೆ ಇಸವಿಯಿಂದ ಹಂತ ಹಂತ ವಾಗಿ ಇದರ ವ್ಯಾಪ್ತಿ ಹೆಚ್ಚಾಯಿತು ಆದರೆ 2005–06 ರಲ್ಲಿ ಮುಕ್ತಾಯವಾಯಿತು.

5. ಈ ಸಂಖ್ಯೆಗಳು ಶೇಕಡಾ 100ಕ್ಕೆ ಸೇರುವುದಿಲ್ಲ ಏಕೆಂದರೆ ಮಾಧ್ಯಮಿಕ ಶಾಲಾ ಮಾಹಿತಿಯು ಕಚ್ಚಾ ಮಾಹಿತಿಯನ್ನು ಆಧರಿಸಿದೆ. ಮಾಹಿತಿ ಸಂಗ್ರಹದ ಪ್ರಕಾರ ಶಾಲೆಗಳು ಶಿಕ್ಷಕರನ್ನು ತಾತ್ಕಾಲಿಕ ಶಿಕ್ಷಕರೆಂದು ವರ್ಗೀಕರಿಸಿವೆ ಮತ್ತು ಕಚ್ಚಾ ಮಾಹಿತಿಯೇ ಮೂರು ವಿದಧ ಉದ್ಯೋಗ ಗುತ್ತಿಗೆಗಳ ಬಗ್ಗೆ ವರದಿ ಮಾಡಿದೆ.

6. ಕರ್ನಾಟಕದ ನೇಮಕಾತಿ ನಿಯಮವು ವೃತ್ತಿಪರ ಶಿಕ್ಷಣಕ್ಕೆ ಮಹತ್ವ ನೀಡಿರುವುದರಿಂದ ಕಡಿಮೆ ಶೈಕ್ಷಣಿಕ ಅರ್ಹತೆ ನಿಗದಿಗೊಳಿಸಿದೆ ಈಗಾಗಿ ಕರ್ನಾಟಕವನ್ನು ಬಿಡಲಾಗಿದೆ.

7. ಇಲ್ಲಿ ವರದಿ ಮಾಡಿರುವ ವೇತನಗಳು ನಿವ್ವಳ ವೇತನದ ಅಂದಾಜುಗಳಾಗಿವೆ.

8. ಈ ಸಂಖ್ಯೆಗಳು ನಗರ ಪ್ರದೇಶಗಳಲ್ಲಿ ನಿಯೋಜಿಸಿರುವ ಶಿಕ್ಷಕರಿಗೆ ಸಂಬಂದಿಸಿವೆ.

9. ಅಂಜಲಿ ನರ್‍ವೋನ, ಅರ್‌ವಿಂದ ಜೈನ್, ಪ್ರದೀಪ್ ಚೌಬೆ, ಕುಲ್‌ಸುಂ ರಶೀದ್, ಮಹೇಶ್ ಬಸೇದಿಯ, ನಮ್ರತ ಬಾರ್‍ತಕುರ್ ಮತ್ತು ನವನೀತ್ ಕೌರ್ (2015) ರು ಅಧ್ಯಯನದ ಭಾಗವಾಗಿ ಮಧ್ಯಪ್ರದೇಶಕ್ಕೆ ಸಲ್ಲಿಸಿದ್ದ "ಮಧ್ಯ ಪ್ರದೇಶದ ಪ್ರಾಥಮಿಕ ಶಿಕ್ಷಕರ ಕೆಲಸದ ಪರಿಸ್ಥಿತಿ" ಎಂಬ ರಾಜ್ಯ ವರದಿಯಿಂದ ಈ ಚರ್ಚೆಯ ಹೆಚ್ಚಿನ ಭಾಗವನ್ನು ಪಡೆಯಲಾಗಿದೆ.

10. 2013 ಸೆಪ್ಟಂಬರ್‌ನಲ್ಲಿ ಪ್ರಕಟಗೊಂಡ ದಿನ ಪತ್ರಿಕೆಯ ಕತೆಗಳ ಪರಾಮರ್ಶೆಗಳು: "5178 ಶಿಕ್ಷಕರ ನಕಲಿ ಪದವಿಗಳ ಹಗರಣ: ನಕಲಿ ಪದವಿಗಳ ಆಧಾರವನ್ನು ಪರೀಕ್ಷಿಸಲು ಪಂಜಾಬ್ ಸರ್ಕಾರ ತಜ್ಞರ ಸಮಿತಿಯನ್ನು ದೆಹಲಿಗೆ ಕಳಿಸಲು ತೀರ್ಮಾನ" 10 ಡಿಸೆಂಬರ್ 2013. http:rajnewinfo.blogspot.in/2013//5178-teachers-face-degrees-scam-punjab.hrml.

ಬಿಹಾರ್: “ನಕಲಿ ಪದವಿಗಳ 15000 ಶಿಕ್ಷಕರನ್ನು ವಜಾ ಮಾಡಿದ ಬಿಹಾರ್” 28 ಡಿಸೆಂಬರ್ 2018ರಲ್ಲಿ ಮೊದಲ ಪ್ರಕಟಣೆ, “Bihar Sacks 15000 Teachers for Facking Degrees” 28 December 2008: http://www.news318.com/news/india/bihar

1. Artherton, Paul and Geeta Kingdon (2010).“The Relative Effectiveness and Costs of Contarct and Regular Teachers in India”. *Centre for the Study of African EconomicsSeries*: available at:http://www.csae.ox.ac.uk/workingpapers/pdfs/2010-15 text.pdf.
2. DNA (2014): “Govt. High School Contract Teachers Launch Indifinite Strick.” DNA, Bhubaneshwar, 4, November: available at:http://www.iamin.in/en/ bhubaneshwar/news/govt-high-school-contract-teachers-launch-indfinite-strike-45478
3. Dundar, Halil, Tara Beteille, Michel Riboud and Anil Deolalikar (2014). *Student Learning in South Asia: Challenges, Opportunities and Policy Priorities,* The World Bank Washington DC.
4, Khare, Divya and Sanjay Ojha (2013): ‘ For Rs 20k, Get a Fake Bed Degree and aJob”.*TimesofIndia*, 22 Januray, http://timesofindia.indiatimes.com/city/ranchi/for-rs-20k-get-a-fake-bed-degree-and-a-job/articleshow/181244955.cms
5. Muridharn, Karthik and V Sundaraman (2010):“Contarct Teachers: Experimental Evidence from India,” *Journal of Political Economy* 119.1:39-77
6. Naresh Kumar Dudeja and others v State of Haryana and Another (2012): CRM No M-19327 of 2012 (O&M), on 11 October.
7. Pande, Priyanka and Sangeeta Goayal (2010): “How Do Govt and Private Schools Differ?,” *Economic and Political Weekly,* Vol XLVII, No.22 2 June, 67-76
8. Ramachandran, Vimala Tobias Linden, Tara Beteille, Sangeeta Goayal, Sangeeta Dey and Prema G Chattarjee (Forthcoming): *Teachers in the Indian Education System,* New Delhi: National University of Educational Planning and Administarion.
9. Robinson, Nick and Varun Gauri (2010): “Education, Labour Rights and Icentives: Contract Teachers in Indian Courts, “Policy Research Working Paper 5365, Washington DC: The World Bank, Development Research Group.
10. Sharma, Rashmi (1999). “What Manner of Teacher-Some Lessons from Madhya Pradesh. *“Economic and Political Weekly,* 34(25) 1597-1607
11. Sharma, Rashmi and Vimala Ramachandran (2009): *The Elementary Education System in India: Exploring Institutional Structures, Process and Dynamics,* New Delhi: Routledge India.
12. Telegraph (2010): “Para Teachers and Protest Path” Telegraph, available at: http://www.telegraphindia.com /100830/jsp/jharkand/story/
13. New Indian Express (2013): “Teachers Proteest Turns Voilent in Bihar.” *New IndianExperess*,5Mrach, http://www.newindianexpress.com/nation/article489427.ece.
14. Tribune (2015):“Governemnt to Restore Services of Guest Contractual Teachers: Protesters to Continue Hunger Stricks for Fixed Salaries.” *Tribune 14 May*, htpp:/www.tribuneindia.com/news/delhi.

15. TOI (2014):"Bihar Governemnt Sacks 1137 Teachers Over Fake Degree, Invalid Documents." *Timesofindai 22 July*, http://timesofindia.indiatimes.com/city/patna/Bihar/-govt-sacks-1137-teachers-over-fake-degree-invalid-documents-articleshow/
16. --- (2015). "Three Thousand Bihar Teachers Quit Fearing Action Over Fake Degree." Timesofindia, 28 July, http:// timesofindia.indiatimes.com/home/education/news/3000-teachers-quit-fearing-action-over-fake-degree-article-show

**THE NINE STATE REPORTS**

(1). Jha, Jyotsna, Puja Minni, G V S R and Neha Ghatak (unpolished): "Working Conditions of Teachers in Karnataka and Jharkand." Bangalore: Centre for Budget and Policy Studies and New Delhi: National University of Educational Planning and Admisistarive (NUEPA).
(2). Nagpal, Nagendra (2015). "Working Conditions of Teachers in Rajastan." Jaipur: Centre for Education, Research and Practice and New Delhi: NUEPA
(3). Inbaraj, J and S Manivel (unpublished): "Working Conditions of Teachers in TamilNadu." Chenai: State Council of Educational Research and Training (SCERT) and New Delhi: NUEPA
(4). Naronha, Anjali, Arvind Jain and Pradeep Chaubey (2015)."Working Conditions of Teachers in MadyaPradesh." Bhopal: Eklavya and New Delhi: NUEPA
(5). Chuadhari, Hom.S and Nikhil Mathur (unpublished): "Working Conditions Teachers in Mizoram," Aizwal: Institute of Advanced Studies in Education and New Delhi: NUEPA
(6). Joshi, Lohitakshaya, Abani Mohan Panigrahi and Prashant Kumar Panda (unpubulished): "Working Conditions Teachers in Odisha," (Naupada) Odisha: Lokdrusti Naupada and New Delhi: NUEPA
(7). Pachuri, Anupam, M S Sarkaria ((unpubulished): "Working Conditions Teachers in Panjab," Chandighar: (SCERT) and New Delhi: NUEPA
(8). Mathur, Nikhil, Ajay Singh Agarwal (unpubulished): "Working Conditions Teachers in Uttar Pradesh," Lucknow: (SCERT) and New Delhi: NUEPA